ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ರಾಜನಕೋಳೂರು

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ರಾಘವೇಂದ್ರ ಜಹಗೀರದಾರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**RAJANAKOLURU:** An Introduction Book on Places in Karnataka that Played a Major Role in the Freedom Struggle, Written by Raghavendra Jahagiradar, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ರಾಘವೇಂದ್ರ ಜಹಗೀರದಾರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೬೪


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಝಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಕರ್ನಾಟಕದ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನಲ್ಲಿರುವ ರಾಜನಕೋಳೂರು ಗ್ರಾಮವು ಜಿಲ್ಲಾ ಪಂಚಾಯತ್ ಮತಕ್ಷೇತ್ರವನ್ನು ಹೊಂದಿರುವ ದೊಡ್ಡ ಗ್ರಾಮವಾಗಿದೆ. ಈ ಗ್ರಾಮವು ಸುಮಾರು ಎಂಟು ಸಾವಿರ ಜನವಸತಿಯುಳ್ಳದ್ದಾಗಿದೆ. ಇದು ಹುಣಸಗಿಯಿಂದ ದಕ್ಷಿಣಕ್ಕೆ ನಾರಾಯಣಪುರದ ಬಸವ ಸಾಗರ ಆಣೆಕಟ್ಟೆಗೆ ಹೋಗುವ ಮಾರ್ಗದಲ್ಲಿದೆ.

ಇದು ಐತಿಹಾಸಿಕವಾಗಿ ಮತ್ತು ಪ್ರಾಗೈತಿಹಾಸಿಕವಾಗಿ ರಾಜ್ಯದಲ್ಲಿ ಹೆಸರು ಮಾಡಿರುವ ಗ್ರಾಮವಾಗಿದೆ. ರಾಜನಕೋಳೂರಿನಲ್ಲಿ ಲಕ್ಷ ವರ್ಷಗಳ ಹಿಂದೆ ಜನವಸತಿ ಇತ್ತೆಂಬುದಕ್ಕೆ ಅಲ್ಲಿನ ಬುಡ್ಡರ ಮನೆಗಳೆಂದೇ ಹೆಸರಾದ ಶಿಲಾಸಮಾಧಿಗಳನ್ನು ಗಮನಿಸಬಹುದು. ಈ ಶಿಲಾಸಮಾಧಿಗಳು ಕರ್ನಾಟಕದ ಹಲವೆಡೆ ಕಂಡು ಬಂದಿವೆ. ಯಾದಗಿರಿ ಜಿಲ್ಲೆಯಲ್ಲಿನ ಏಕೈಕ ಶಿಲಾಗೋರಿಗಳಿರುವ ನೆಲೆ ಎಂದರೆ ರಾಜನಕೋಳೂರು. ಇವುಗಳ ನಿರ್ಮಾಣದಲ್ಲಿಯೂ ಸಹ ವಾಸ್ತು ವೈವಿಧ್ಯತೆಯನ್ನು ಪ್ರಾಕ್ತನ ತಜ್ಞರು ಗುರುತಿಸಿದ್ದಾರೆ. ಈ ಕಟ್ಟಡದ ವಿನ್ಯಾಸವು ವೈವಿಧ್ಯತೆಯಿಂದ ಕೂಡಿದೆ. ಈ ಕಟ್ಟಡಗಳ ಅವಶೇಷಗಳೇ ಅತ್ಯಂತ ಪ್ರಾಚೀನ ನಿರ್ಮಿತಿಗಳೆಂದು ಗುರುತಿಸಲಾಗಿದೆ. ಸ್ಮಶಾನದಲ್ಲಿರುವ ಸಮಾಧಿಗಳಿಂದ ಗುರುಸಿಕೊಳ್ಳುವಲ್ಲಿ ಅಂತಹ ವಿಶೇಷವೇನಿದೆ ಎಂದೆನಿಸಬಹುದು, ಆದರೆ ಇಲ್ಲಿನ ಸಮಾಧಿ ಸಾವಿರಾರು ವರ್ಷಗಳಿಂದ ಇರುವುದು ವಿಶೇಷ. ಇವುಗಳನ್ನು ಬುಡ್ಡರ ಮನೆಗಳೆಂದೂ, ಡಾಲ್ಮೆನ್‌ಗಳೆಂದೂ ಕರೆಯುವರು.

ಐತಿಹಾಸಿಕವಾಗಿಯೂ ರಾಜನಕೋಳೂರು ಮಹತ್ವದ ನೆಲೆಯಾಗಿದೆ ಎಂದು ಗ್ರಾಮದ ಶಂಕರನಾರಾಯಣ ಗುಡಿಯಲ್ಲಿ ದೊರೆತ ೨

ಶಿಲಾಶಾಸನಗಳಿಂದ ಗುರುತಿಸಬಹುದು. ಶಂಕರನಾರಾಯಣ ಗುಡಿಯಲ್ಲಿರುವ ೨ ಶಿಲಾಶಾಸನಗಳನ್ನು ಒಳಗಿನ ಗೋಡೆಯಲ್ಲಿ ಜೋಡಿಸಲಾಗಿದೆ.

ರಾಜನಕೋಳೂರು ಗ್ರಾಮವು ಪ್ರಾಗೈತಿಹಾಸಿಕ, ಐತಿಹಾಸಿಕ ಅಷ್ಟೇ ಅಲ್ಲದೆ ವಿಶೇಷವಾಗಿ ರಾಜನಕೋಳೂರಿನ ಕೆಚ್ಚೆದೆಯ ಗಂಡುಗಲಿ ಎಂದೇ ಪ್ರಖ್ಯಾತರಾದ, ನಿಜಾಮರ ನಿದ್ದೆಗೆಡಿಸಿ ಹುತಾತ್ಮರಾದ ಶ್ರೀ ವಿರೂಪಾಕ್ಷಪ್ಪಗೌಡರಿಂದಲೂ ಈ ಗ್ರಾಮವನ್ನು ಗುರುತಿಸುವರು.

ಶ್ರೀ ವಿರೂಪಾಕ್ಷಪ್ಪಗೌಡರ ಜೀವನ ಚರಿತ್ರೆ, ಶೌರ್ಯ, ಸಾಹಸವನ್ನು ಹಿರಿಯ ಸಾಹಿತಿ ಶ್ರೀ ವೀರೇಶ ಹಿರೇಮಠ ಹಳ್ಳೂರರವರು ೨೦೦೬ರಲ್ಲಿಯೇ ಕೋಳೂರು ಕೇಸರಿ ಶ್ರೀ ವಿರೂಪಾಕ್ಷಪ್ಪಗೌಡರು ಎಂಬ ಕೃತಿಯನ್ನು ಹೊರತಂದಿದ್ದರು. ಪ್ರಸ್ತುತ ಕೃತಿಯು ಅದೇ ಕೃತಿಯಿಂದ ಪ್ರೇರಣೆ ಪಡೆದು ಒಂದಷ್ಟು ಹೊಸ ಸಂಗತಿಗಳನ್ನು ಇಲ್ಲಿ ದಾಖಲಿಸಿದೆ. ಈ ಕೃತಿಯನ್ನು ಬರೆಯಲು ಕಾರಣೀಭೂತರಾದ ಶ್ರೀ ಶ್ರೀನಿವಾಸ ಜಾಲವಾದಿಯವರು ಹಾಗೂ ಕೃತಿಯ ಸಂಪಾದಕರಾದ ಡಾ. ಪ್ರಕಾಶ ಜಿ. ಖಾಡೆ ಬಾಗಲಕೋಟರವರಿಗೆ ಅನಂತ ಕೃತಜ್ಞತೆಗಳು.

**– ಶ್ರೀ ರಾಘವೇಂದ್ರ ಜಹಗೀರದಾರ, ಕಾಮನಟಗಿ**
ಹುಣಸಗಿ

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ರಾಜನಕೋಳೂರು | ೧೫ |
| ● ಅನುಬಂಧ | |
| ಛಾಯಾಚಿತ್ರಗಳು | ೫೫ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೭ |

# ಕೆಚ್ಚೆದೆಯ ಗಂಡುಗಲಿ ವಿರೂಪಾಕ್ಷಪ್ಪಗೌಡರು

ಬ್ರಿಟೀಷ್ ಮತ್ತು ನಿಜಾಮಶಾಹಿ ವಿರುದ್ಧ ಸಮರ ಸಾರಿ ಸ್ವಾತಂತ್ರ್ಯ ದೊರಕಿಸಿಕೊಟ್ಟು ವೀರ ಸ್ವರ್ಗವನ್ನಪ್ಪಿದ ವೀರಯೋಧ ಕೆಚ್ಚೆದೆಯ ಗಂಡುಗಲಿ ಶ್ರೀ ವಿರೂಪಾಕ್ಷಪ್ಪಗೌಡರ ಜನ್ಮಸ್ಥಳವೇ ಈ ರಾಜನಕೋಳೂರು.

ರಾಜನಕೋಳೂರದಲ್ಲಿಯೇ ಶ್ರೀಮಂತಿಕೆಯಿಂದ ತುಂಬಿದ ದೊಡ್ಡ ಮನೆತನವವೆಂದರೆ ಹೊಸಮನಿ ಶ್ರೀ ಬಸವಂತರಾಯಗೌಡರದು. ಪತಿಗೆ ತಕ್ಕ ಸತಿ ಗೌರಮ್ಮನವರು ೧೨೦ ಎಕರೆ ಬಹು ಬೆಲೆಯುಳ್ಳ ಭೂಮಿ. ಅವರ ಮನೆತನ ಬಳುವಳಿಯಾಗಿ ಬಂದ "ರಕ್ತಮಾನ್ಯ, ಮತ್ತು ಸರ್ವಮಾನ್ಯ" ಹೊಲಗಳು ಇವರ ಮನೆತನದ ಹಿರಿಯರ ಧೀರತನದ ನಿದರ್ಶನಗಳಾಗಿವೆ.

ದೇವರು ಎಲ್ಲವನ್ನೂ ದಯಪಾಲಿಸಿದ್ದ ಆದರೆ ಈ ದಂಪತಿಗಳಿಗೆ ಸಂತಾನ ಭಾಗ್ಯವನ್ನು ದಯಪಾಲಿಸಿರಲಿಲ್ಲ. ಸಂತಾನದ ಚಿಂತೆಯಲ್ಲಿಯೇ ಗೌರಮ್ಮ ಗೌಡಶಾನಿಯವರು ಕೊರಗುತ್ತಿದ್ದರು. ಸೊರಗಿ ಸಣ್ಣಾಗಿದ್ದರು.

"ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು" ಎಂಬಂತೆ ಮನೆಗೆ ಯಾರೇ ಬಡಬಗ್ಗು ಬಂದರೂ ನಗು ಮೊಗದಿಂದ ಅವರನ್ನು ಕರೆದು ಕುಳ್ಳಿರಿಸಿ ಅವರ ಕಷ್ಟ ಸುಖಗಳನ್ನು ವಿಚಾರಿಸುತ್ತಿದ್ದರು. ಅವರ ದುಃಖದ ಮಾತುಗಳನ್ನು ಕೇಳಿ ಗೌರಮ್ಮನವರು ಅವರಿಗೆ ಸಾಂತ್ವನದ ಮಾತುಗಳನ್ನು ಹೇಳಿ ಕೇಳಿದುದನ್ನು ಕೊಟ್ಟು ಕಳುಹಿಸುತ್ತಿದ್ದರು. ದಾನಮಾಡಿ, ದಾನಮ್ಮನೆಂದೇ ಹೆಸರು ಪಡೆದಳು. "ಅಮ್ಮ"ನೆಂದೇ ಕರೆಯುವ ವಾಡಿಕೆಯಾಗಿದೆ. ಕೋಳೂರಿನ ಜನತೆ ಗೌರಮ್ಮನನ್ನು ಬಸವಂತರಾಯಗೌಡರ ಮನೆಗೆ ಬಂದ ಭಾಗ್ಯದ ಲಕ್ಷ್ಮೀ ಎಂದೇ ಕರೆಯುತ್ತಿದ್ದರು.

ಮನೆಯಲ್ಲಿ ಕನಕ ಕಾಂಚಣ ದವಸ ಧಾನ್ಯಗಳು ತುಂಬಿ ತುಳುಕಿ ಶ್ರೀಮಂತಿಕೆಯಿಂದ ಮೆರೆಯುತ್ತಿದ್ದರು.

ಸಿರಿವಂತಿಕೆ ಆಡಂಬರ ಅಹಂಭಾವ ಎಳ್ಳನಿತು ಇರಲಿಲ್ಲ. ಏನಿದ್ದರೂ ಎಷ್ಟಿದ್ದರೂ ಅವರಿಗಿದ್ದ ಕೊರತೆಯೆಂದರೆ ಗಂಡು ಸಂತಾನ. ಅದಕ್ಕೆ ಅಮ್ಮ ಗೌರಮ್ಮನವರು ಹಗಲಿರುಳೂ ದೇವ ಚಿಂತನೆಯಲ್ಲಿ ತೊಡಗಿದರು. ಚಿಂತೆ ಮಾಡಿದವ ಉಳಿಯುವುದಿಲ್ಲ. ಚಿಂತನ ಮಾಡಿದವ ಬೇಗ ಸಾಯುವದಿಲ್ಲ. ಎಂಬಂತೆ ಅಮ್ಮನವರು ಸತತವಾಗಿ ದೇವ ಚಿಂತನೆಯಲ್ಲಿ ಕಾಲ ಕಳೆಯುತ್ತಿದ್ದಳು. ಯಾವುದಕ್ಕೂ ಧೃತಿಗೆಡದೆ ಊರ ಹನುಮಂತದೇವರಲ್ಲಿ ಅನನ್ಯ ಭಯ ಭಕ್ತಿಯಿಂದ ನಡೆದುಕೊಳ್ಳತೊಡಗಿದರು. ತುಳಸಿಗೇರಿಯ ಹನುಂತದೇವರಿಗೆ ಬೇಡಿಕೊಂಡು ಸಿಂಧೂರ ಲಕ್ಷ್ಮಣನನ್ನು ಹೆತ್ತ ತಾಯಿಯಂತೆ ಅಮ್ಮನವರು ಈ ಚರಿತ್ರೆಯ ನಾಯಕ ವಿರೂಪಾಕ್ಷಪ್ಪಗೌಡರನ್ನು ಪಡೆದಳು. ವಿರೂಪಾಕ್ಷಪ್ಪಗೌಡರು ಹುಟ್ಟಿದ ಮನೆತನಕ್ಕೆ, ಊರಿಗೆ ಅಷ್ಟೇ ಅಲ್ಲ, ಕನ್ನಡ ನಾಡಿಗೆ ಹೆಸರು ತಂದರು.

ವಿರೂಪಾಕ್ಷಪ್ಪಗೌಡರು ೧೯೨೫ ರಲ್ಲಿ ರಾಜನಕೊಳ್ಳೂರಲ್ಲಿ ಜನಿಸಿದರು. ತಂದೆ ಬಸವಂತರಾಯಗೌಡ ತಾಯಿ ಗೌರಮ್ಮನವರಿಗಾದ ಆನಂದಕ್ಕೆ ಪಾರವೇ ಇಲ್ಲ. ಬಹುದಿನಗಳಿಂದಲೂ ತಪಗೈದು ಬೇಡಿ ಬಯಸಿ ಪಡೆದ ಪುತ್ರನ ಜಾತಕವನ್ನು ಸಂಪ್ರದಾಯದಂತೆ ಅಂದಿನ ಪೀರಾಪುರದ ಶ್ರೀ ಅಡಿವೆಪ್ಪನವರಿಗೆ ಕೇಳಿದರು. ಅಡಿವೆಪ್ಪನವರು ನಿಮ್ಮ ಮಗನಿಗೆ ೨೫ ವರ್ಷಕ್ಕೆ ಒಂದು ಮಾರಣಾಂತಿಕ ಕುತ್ತು ಬರತೈತಿ ಒಂದು ವೇಳೆ ಅದು ತಪ್ಪಿದರೆ ೭೦ ವರುಷಗಳವರೆಗೆ ಬಾಳುತ್ತಾನೆಂದು ಹೇಳಿದರು. ತಂದೆ ತಾಯಿಗಳ ಮನಸ್ಸಿಗೆ ತುಸು ಕಸವಿಸಿ ಆಯಿತು. ಅಷ್ಟಕ್ಕೆ ಬಿಡದೆ ತಾಳಿಕೋಟೆಗೆ ಹೋಗಿ ಆಗಿನ ಕಾಲದಲ್ಲಿ ವಾಕ್ ಸಿದ್ಧಿಯನ್ನು ಪಡೆದಂಥ ಖ್ಯಾತ ಶರಣರಾದ ಕುಂಬಾರ ಶರಣರಿಗೆ ಕೇಳುತ್ತಾರೆ.

ಆಗ ಶರಣರು, ಅದ್ಭುತವಾದ ರೋಮಾಂಚನಕಾರಿಯಾದ ವಿರೂಪಾಕ್ಷಪ್ಪಗೌಡರ ಜಾತಕವನ್ನು ಅಥವಾ ಜನ್ಮಕುಂಡಲಿಯನ್ನು ತೆಗೆದು ಈ ರೀತಿ ಹೇಳುತ್ತಾರೆ. ಈತನು ತನ್ನ ೧೨ನೆಯ ವಯಸ್ಸಿಗೆ ಬಂದೂಕು ಹಿಡಿಯುತ್ತಾನೆ. ೨೫ನೆಯ ವಯಸ್ಸಿಗೆ ಒಂದು ಮಾರಣಾಂತಿಕ ಕುತ್ತು ಬರತ್ತದೆ.



ಒಂದು ವೇಳೆ ಅದು ತಪ್ಪಿದರೆ ೭೦ ವರುಷಗಳವರೆಗೆ ಬಾಳುತ್ತಾನೆ ಎಂದು ಹೇಳಿದ ಶರಣರ ಮಾತುಗಳನ್ನು ಕೇಳಿದ ತಂದೆ–ತಾಯಿಗಳಿಗೆ ಒಮ್ಮಿಂದೊಮ್ಮೆಯೇ ಖೇದಾಶ್ಚರ್ಯಗಳೆರಡೂ ಏಕಕಾಲಕ್ಕೆ ಹೊರಹೊಮ್ಮಿದವು. ಕಣ್ಣಂಚಿನಿಂದ ಆನಂದ ಭಾಷ್ಪಗಳುದುರಿದವು.

ಬಾಲಕ ವಿರುಪಾಕ್ಷಪ್ಪಗೌಡರು ಬೆಳೆದು ದೊಡ್ಡವರಾದಂತೆ ಅವರಲ್ಲಿ ಬಹುದೊಡ್ಡ ಪ್ರತಿಭೆ ಎದ್ದುಕಾಣತೊಡಗಿತು." ಬೆಳೆಯುವಸಿರಿ ಮೊಳಕೆಯಲ್ಲಿ ನೋಡು" ಎಂಬ ಗಾದೆಯಂತೆ ಗೌಡರ ಬೆಳವಣಿಗೆ ದಿನದ ಬೆಳವಣಿಗೆ ದಿನಕ್ಕಿಲ್ಲ. ಸದೃಢ ಕಾಯನಾಗಿ ಸ್ಫುರದ್ರೂಪಿಯಾಗಿ ಎಲ್ಲರ ಕಣ್ಣಿಗೆ ಹುಣ್ಣಿಮೆ ಚಂದ್ರಮನಂತೆ ಕಂಗೊಳಿಸತೊಡಗಿದರು.

ಬಾಲಕ ವಿರುಪಾಕ್ಷಪ್ಪಗೌಡರು ವಯಸ್ಸಿನ ಮೆಟ್ಟಿಲುಗಳನ್ನು ಏರುತ್ತಿದ್ದಂತೆಯೇ ತನ್ನ ಓರಿಗೆಯ ಗೆಳೆಯರನ್ನು ಎರಡು ಗುಂಪುಗಳನ್ನಾಗಿ ಹಂಚುತ್ತಿದ್ದ. ವೀರ ಸಾಹಸದ ಆಟಗಳನ್ನು ಆಡುತ್ತಿದ್ದ, ಓರಿಗೆಯವರಲ್ಲಿ ಮುಂದಾಳಾಗಿ ಇರಬೇಕೆನ್ನುವಾಸೆ "ಮೂರು ವರುಷದ ಬುದ್ಧಿ, ನೂರು ವರುಷಗಳವರೆಗೆ" ಎಂಬಂತೆ ಬಹು ಚೂಟಿಯಾಗಿ ಚಟುವಟಿಕೆಯುಳ್ಳವನಾಗಿ ಬೆಳೆಯತೊಡಗಿದರು. ದಷ್ಟಪುಷ್ಟವಾದ ಅಂಗಸೌಷ್ಟವ ಹೊಳೆಯುವ ಕಣ್ಣು, ಮುಖಕ್ಕೆ ತಕ್ಕ ಮೂಗು, ಜನರನ್ನು ಆಕರ್ಷಿಸುತ್ತಿದ್ದವು. ತಂಬಿಗೆ ತಂಬಿಗೆ ಹಾಲನ್ನು ಗಟ ಗಟನೇ ಕುಡಿಯುತ್ತಿದ್ದ. ಬಾಲ್ಯದಿಂದಲೇ ಧೈರ್ಯ ತುಂಬಿ ತುಳುಕುತ್ತಿತ್ತು. ಸ್ಥೈರ್ಯ ಕೇಕೆ ಹಾಕುತ್ತಿತ್ತು. ತಂದೆ–ತಾಯಿಗಳು ಈತನ ಆಟ ಪಾಠಗಳನ್ನು ಕಣ್ತುಂಬನೋಡಿ ನಲಿಯುತ್ತಿದ್ದರು.

"ಶಿಕ್ಷಣವು ಜೀವನದ ತಳಹದಿ ಅಥವಾ ಬುನಾದಿ ಎಂಬುದನ್ನು ಯಾರೂ ಮರೆಯುವಂತಿಲ್ಲ. ಯಾವುದೇ ಒಂದು ಕಟ್ಟಡ ಬಹುದಿನಗಳವರೆಗೆ ಬಾಳ ಬೇಕಾದರೆ ಅದಕ್ಕೆ ಮೂಲವಾದದ್ದು ಬುನಾದಿ.

ಜಗತ್ತಿನ ನಿಯಮದಂತೆ ಎಲ್ಲ ತಂದೆ–ತಾಯಿಗಳಂತೆ ನನ್ನ ಮಗ ಒಬ್ಬ ಶ್ರೇಷ್ಠ ವ್ಯಕ್ತಿಯಾಗಬೇಕು. ದೊಡ್ಡ ಶ್ರೀಮಂತನಾಗಬೇಕು, ದೊಡ್ಡ ವಿದ್ಯಾವಂತನಾಗಬೇಕು, ದೊಡ್ಡ ಅಧಿಕಾರಿಯಾಗಬೇಕು ಹೀಗೆ ಹತ್ತು ಹಲವಾರು ಆಸೆಗಳನ್ನು ಇಟ್ಟುಕೊಳ್ಳುವುದು ಮಾನವನ ಒಂದು ಸಹಜಧರ್ಮ. ಆಶಾ

ಗೋಪುರಗಳನ್ನು ಕಟ್ಟುವುದು ಮಾನವನ ಜನ್ಮಸಿದ್ಧ ಹಕ್ಕು. ಅವು ಕೆಲವೊಂದು ಜನರಿಗೆ ಸಾಧಿಸಬಹುದು ಸಾಧಿಸಲಿಕ್ಕಿಲ್ಲ.ಆದರೂ ಮಾನವನು ಆಶಾವಾದಿಯಲ್ಲವೇ ?

ವಿರೂಪಾಕ್ಷಪ್ಪಗೌಡರು ಬೆಳೆದು ದೊಡ್ಡವರಾದಂತೆ ಒಂದರಿಂದ ಮೂರನೆಯ ತರಗತಿಯವರೆಗೆ ಸ್ವಗ್ರಾಮದಲ್ಲಿಯೇ ಅಭ್ಯಾಸವನ್ನು ಮುಗಿಸಿದರು. ಗೌಡರು ಮೂರನೆ ತರಗತಿಯಲ್ಲಿ ಓದುತ್ತಿರುವಾಗಲೇ ತೆಲಂಗಾಣದಿಂದ ವೆಂಕಪ್ಪ (ಬುಡ್ಡರ) ಎಂಬ ಮಾಸ್ತರರು ರಾಜನಕೋಳೂರಿಗೆ ಬಂದರು. "ಎತ್ತಣ ಮಾಮರ? ಎತ್ತಣ ಕೋಗಿಲೆ ಎಲ್ಲಿಂದೆಲ್ಲಿಗೆ ಸಂಬಂಧವಯ್ಯ?" ಎಂಬ ನುಡಿಯಂತೆ ವೆಂಕಪ್ಪ ಮಾಸ್ತರರಿಗೂ ವಿರೂಪಾಕ್ಷಪ್ಪಗೌಡರಿಗೂ ಅದಾವ ಜನ್ಮದ ನಂಟಸ್ತನವೋ ಏನೋ ವೆಂಕಪ್ಪ ಮಾಸ್ತರರು ಸುಮಾರು ನಾಲ್ಕು ವರುಷಗಳವರೆಗೆ ಕೋಳೂರಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ವೆಂಕಪ್ಪ ಮಾಸ್ತರ ವಿರೂಪಾಕ್ಷಪ್ಪಗೌಡರ ಮನೆಯಲ್ಲಿಯೇ ಊಟ ಮಾಡುತ್ತಿದ್ದರು. ತಮ್ಮ ಕೈಯಲ್ಲಿ ಕಲಿಯುತ್ತಿದ್ದ ಈ ಬಾಲಕ ವಿರೂಪಾಕ್ಷಪ್ಪಗೌಡನ ರೀತಿ ನೀತಿ ಅವನ ಚಟುವಟಿಕೆ ಬಾಲ್ಯದಲ್ಲಿಯೇ ಎದ್ದು ಕಾಣುತ್ತಿತ್ತು. ಅಂಕಿ, ಮಗ್ಗಿ, ಓದು ಬರಹ ಚಿಕ್ಕ ಚಿಕ್ಕ ಲೆಕ್ಕ ಮುಂತಾದವುಗಳಲ್ಲಿ ಹೆಚ್ಚಿನ ಸಾಮರ್ಥ್ಯವನ್ನು ವೆಂಕಪ್ಪ ಮಾಸ್ತರರು ಬಾಲಕ ವಿರೂಪಾಕ್ಷಪ್ಪಗೌಡನಲ್ಲಿ ತುಂಬಿದುದು ಎಲ್ಲರೂ ಒಪ್ಪುವಂತಹ ಮಾತಾಗಿದೆ.

ಹೈದರಾಬಾದ್‌ನಲ್ಲಿ ಓದುತ್ತಿದ್ದಾಗ ಇವರ ಉತ್ಸಾಹ ಇವರಲ್ಲಿದ್ದ ಕ್ರಾಂತಿಕಾರಕ ವಿಚಾರ ಮತ್ತು ವಿವಿಧ ಚೇತನಕಾರಿ ಚಟುವಟಿಕೆಗಳನ್ನು ಕಂಡು ವಿದ್ಯಾರ್ಥಿಗಳು ಕರುಬುತ್ತಿದ್ದರು. ಬರಿ ಹಿಂದೆ ಮುಂದೆ ಮಾತಾಡುತ್ತಿದ್ದರೆ ಹೊರತು ಇವರನ್ನು ಎದುರಿಸುವ ಧೈರ್ಯ ಯಾವ ವಿದ್ಯಾರ್ಥಿಗಳಲ್ಲಿಯೂ ಇರಲಿಲ್ಲವೆಂದೇ ಹೇಳಬೇಕು. ಹೇಗಾದರೂ ಮಾಡಿ ಇವರನ್ನು ದೂರ ಸರಿಸಿ ತಮ್ಮದೇ ಕಾರ್ಯಭಾರ ಅಥವಾ ಕಾರಭಾರ ನಡೆಸಬೇಕೆಂದು ವಿದ್ಯಾರ್ಥಿಗಳು ಎಷ್ಟು ಪ್ರಯತ್ನ ಮಾಡಿದರೂ ಅದು ಸಫಲವಾಗುತ್ತಿರಲಿಲ್ಲ. ಅದನ್ನು ಪ್ರತಿಭಟಿಸಿ ತಾವೂ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಪಡೆದುಕೊಂಡರು. ವಿರೂಪಾಕ್ಷಪ್ಪಗೌಡರಿಗೆ ಪ್ರತಿಭಟನಾ ಶಕ್ತಿ ವಿದ್ಯಾರ್ಥಿ ಜೀವನದಿಂದಲೇ ಬಳುವಳಿಯಾಗಿ ಬಂದಿತು.



ಒಮ್ಮೆ ಗುಲಬರ್ಗಾದಲ್ಲಿ ಕಾಂಗ್ರೆಸ್ಸಿಗರು ಏರ್ಪಡಿಸಿದ್ದ ಬೃಹತ್ ಸಮಾರಂಭದಲ್ಲಿ ಓರ್ವ ರಾಷ್ಟ್ರಪ್ರೇಮಿ ಧೀಮಂತ ನಾಯಕರು ಭಾಷಣ ಮಾಡಿದರು. ಆಗ ವಿರೂಪಾಕ್ಷಪ್ಪಗೌಡರು ಆ ಸಭೆಯಲ್ಲಿ ಉಪಸ್ಥಿತರಿದ್ದು ಆ ವ್ಯಕ್ತಿಯ ಭಾಷಣವನ್ನು ಲಕ್ಷ್ಯಗೊಟ್ಟು ಆಲಿಸಿದರು.

"ಯಾರಲ್ಲಿ ಗುಂಡಿಗೆ ಇಲ್ಲವೋ ಯಾರು ಗುಂಡಿಗೆಗೆ ಅಂಜಿ ಹಿಂಜರಿಯುವರೋ ಅವರು ಕ್ರಾಂತಿಕಾರರಾಗಲು ಯೋಗ್ಯರಲ್ಲ. ರಕ್ತ ಕುದಿಯ ಬೇಕಾದರೆ ಸ್ವಯಂ ಸ್ಫೂರ್ತಿಯಿಂದಲೇ ಸಾಧ್ಯ. ಅಂಥದೆಲ್ಲ ಉಪದೇಶದಿಂದ ಆಗುವ ಕಾರ್ಯವಲ್ಲ"

ಈ ಕ್ರಾಂತಿಕಾರಿಕ ಮಾತುಗಳನ್ನು ಕೇಳಿದಾಗ ವಿರುಪಾಕ್ಷಪ್ಪಗೌಡರ ಮೈ ನವಿರೇಳುತ್ತದೆ. ರಕ್ತ ಕುದಿಯುತ್ತದೆ. ದೇಶಪ್ರೇಮ ಅಂಕುರಿಸುತ್ತದೆ.

ನಾನೂ ಭಗತ್‌ಸಿಂಗ್, ಚಂದ್ರಶೇಖರ ಅಜ್ಹಾದ, ಮದನ್‌ಲಾಲ್ ದಿಂಘ್ರಾ, ಫಡ್ಕೆ, ಸಾವರಕರ್, ಸಂಗೊಳ್ಳಿ ರಾಯಣ್ಣರಂತೆ ಕ್ರಾಂತಿವೀರನಾಗಬೇಕೆಂದು ಅವರ ಅಂತರಾತ್ಮ ಹೇಳಿತು. ಅಂದಿನಿಂದಲೇ ಗೌಡರು ತಮ್ಮ ಮನಸ್ಸನ್ನು ಕ್ರಾಂತಿವೀರರ ಚರಿತ್ರೆಗಳನ್ನು ಓದಿ ತಿಳಿದುಕೊಳ್ಳಲು ಹೊರಳಿಸಿತು. ಕಾಲೇಜಿನಲ್ಲಿದ್ದಾಗಲೇ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಮಡಿದ ಹುತಾತ್ಮರ ಸ್ವಾತಂತ್ರ್ಯ ಹೋರಾಟಗಾರರ ಕ್ರಾಂತಿವೀರರ ಚರಿತ್ರೆಗಳನ್ನು ಓದಿ ತಿಳಿದುಕೊಂಡರು.

ವಿದ್ಯಾರ್ಥಿಯಾಗಿದ್ದಾಗಲೇ ದೇಶಪ್ರೇಮ ನಾಡಪ್ರೇಮ ಇವರಲ್ಲಿ ತುಂಬಿ ತುಳುಕುತ್ತಿತ್ತು. ಬಹುಜನ ರಾಜಕೀಯ ಮುತ್ಸದ್ದಿಗಳ ಧಾರ್ಮಿಕ ಮುಖಂಡರ ಕ್ರಾಂತಿಕಾರರ ಬಗ್ಗೆ ಹೆಚ್ಚು ಆಸಕ್ತಿವಹಿಸಿ ತಿಳಿದುಕೊಂಡಿದ್ದರು.

ಎಂಟನೆಯ ತರಗತಿಯಿಂದಲೇ ಆರ್ಯ ಸಮಾಜದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು. ಆಗಿನ ಹೈದರಾಬಾದ್ ನಿಜಾಮನ ರಾಜ್ಯದಾಡಳಿತದಲ್ಲಿ ಯಾರೂ ಕನ್ನಡ ಪೇಪರ್ ಓದುವಂತಿರಲಿಲ್ಲ. "ಸಂಯುಕ್ತ ಕರ್ನಾಟಕ" ಪತ್ರಿಕೆಯನ್ನು ಯಾರೂ ಓದಕೂಡದೆಂದು ಬ್ಯಾನ್ (ನಿಷೇಧ) ಮಾಡಲಾಗಿತ್ತು. ತವಗ ಭೀಮಸೇನರಾವ್ ಅವರ ಮಂಚೂಣಿಯಲ್ಲಿ ಕನ್ನಡದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು.

೧೯೨೪ ರಿಂದ ೧೯೪೮ ವರೆಗೆ ಏಳೂ ಜನ ನಿಜಾಮರು ಹೈದರಾಬಾದ್ ಸಂಸ್ಥಾನರಾಜರಾಗಿ ಹೋಗಿದ್ದು ಇತಿಹಾಸದ ಕೆಲವು ಪುಟಗಳಿಂದ ತಿಳಿದು ಬರುತ್ತದೆ.

"ನವಾಬಮೀರ್ ಉಸ್ಮಾನ ಅಲಿಖಾನ" ನೇ ಹೈದರಾಬಾದ ಸಂಸ್ಥಾನವನ್ನಾಳಿದ ಕೊನೆಯ ನಿಜಾಮನು. (೧೯೧೧–೧೯೪೮) ಭಾರತದಲ್ಲಿ ಆಗ ಸುಮಾರು ೫೬೨ ಸಂಸ್ಥಾನಗಳಿದ್ದವು. ಅವುಗಳಲ್ಲಿ ಹೈದ್ರಾಬಾದ್ ಸಂಸ್ಥಾನವೂ ಒಂದು. ಹೈದ್ರಾಬಾದ್ ಸಂಸ್ಥಾನದಲ್ಲಿ ಬಹುಸಂಖ್ಯಾತ ಪ್ರಜೆಗಳು ಹಿಂದುಗಳೇ ಆಗಿದ್ದರೂ ರಾಜದಂಡ (ಅಧಿಕಾರ) ಮಾತ್ರ ಮುಸಲ್ಮಾನ ದೊರೆಯ ಕೈಯಲ್ಲಿತ್ತು.

ರಾಜಕೀಯ ದಬ್ಬಾಳಿಕೆ ಆರ್ಥಿಕ ಶೋಷಣೆ ಮತ್ತು ಶೈಕ್ಷಣಿಕ ಪ್ರತಿಕೂಲಗಳಿಂದ ಸಾಮಾಜಿಕ ಜೀವನದಲ್ಲಿ ಸುಪ್ತವಾಗಿದ್ದ ಮತೀಯ ವಿಷಯ ಅಸಹನೆ, ಮತ್ಸರ, ಹಿಂದುಗಳ ತಾತ್ಸಾರತೆಗಳೇ ಎದ್ದು ಕಾಣುತಿದ್ದವು. ಮುಸಲ್ಮಾನ ಪ್ರಬಲರಾಗಿದ್ದ ಅಧಿಕಾರಶಾಹಿ ವರ್ಗ ಗ್ರಾಮ ಮಟ್ಟದಿಂದ ವಿಭಾಗ ಮಟ್ಟದವರೆಗೆ ಜನರನ್ನು ನಡೆಸಿಕೊಳ್ಳುವ ರೀತಿ ಮಾತ್ರ ಪಕ್ಷಪಾತದಿಂದ ಕೂಡಿತ್ತು. ಅಷ್ಟೇ ಅಲ್ಲ ಅದು ಎದ್ದು ಕಾಣುತ್ತಿತ್ತು.

ನಿಜಾಮನು ಯಾವುದೇ ರೀತಿಯಲ್ಲಿ ಭಾರತದ ಸರಕಾರದೊಂದಿಗೆ ವಿಲೀನಕ್ಕೆ ವಿರೋಧಿಸಿ ಕಾಸೀಂ ರಜವಿಯ ಮೂಲಕ ಜನತೆಯಲ್ಲಿ ಭಯವನ್ನುಂಟುಮಾಡಿ ಹೈದ್ರಾಬಾದನ್ನು ಪಾಕಿಸ್ತಾನಕ್ಕೆ ಸೇರಿಸಿ ಮಧ್ಯ ಪಾಕಿಸ್ತಾನ ಮಾಡುವ ಉದ್ದೇಶ ಉಳ್ಳವನಾಗಿದ್ದನು.

ರೂಢಿಗತ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಒಪ್ಪಿ ಸ್ವೀಕರಿಸಿ ನಡೆಯುವ ಕಾಲದಲ್ಲಿ ಅಂದಿನ ನಿಜಾಮನ ವಿರುದ್ಧ ಧ್ವನಿ ಎತ್ತುವುದು ಬಹು ಸಾಹಸದ ವಿಷಯವಾಗಿತ್ತು. ಅಂತಹ ಧ್ವನಿ ಸಿಡಿಲ ಧ್ವನಿಯಾಗಿ ಸುತ್ತಲಿನ ಹತ್ತು ಹರದಾರಿ ಸೀಮೆಯಲ್ಲಿ ಮಾರ್ದನಿಗೊಳ್ಳುವಂತೆ ಮಾಡಿದ ಕ್ರಾಂತಿವೀರನೆ ರಾಜನಕೋಳೂರಿನ ಶ್ರೀ ವಿರೂಪಾಕ್ಷಪ್ಪಗೌಡ. ರಜಾಕಾರರ ವಿರುದ್ಧ ಹೈದ್ರಾಬಾದ್ ವಿಮೋಚನಾ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ನೈಜ ಕಥೆಯು ಇದಾಗಿದೆ.



ಸಮರಸವೇ ಜೀವನ ಸಾರ್ಥಕತೆ ಸಿಕ್ಕುವುದು ಅಂಥ ಜೀವಕ್ಕೆ ಮಾತ್ರ ಆದರೆ ಅದರ ಅಭಾವವಿದ್ದರೆ ಹೆಜ್ಜೆ ಹೆಜ್ಜೆಗೂ ಒಡಕು ತೊಡಕು ಧ್ಯೇಯ ಜೀವಿಯ ಜೀವನದಲ್ಲಂತೂ ಇದರ ಬೆಲೆ ಅಪಾರ. ಇದರಿಂದ ಹುಟ್ಟುವ ಶಕ್ತಿ ಅಜೇಯ ಜನರ ಜೀವನದಲ್ಲಿ ಒಂದಾಗಿ ಹೊಂದಿಕೊಂಡು ಹೋಗುವ ನಾಯಕನಿಗೂ ಸೋಲೇ ಇರುವುದಿಲ್ಲ.

ಯಾವುದೇ ವ್ಯಕ್ತಿ ಬೆಳಕಿಗೆ ಬರಬೇಕಾದರೆ, ಕೀರ್ತಿಶಾಲಿಯಾಗಬೇಕಾದರೆ, ಅವನು ಭಯಂಕರವಾದ ಸಾಧನೆ ಮಾಡಬೇಕಾಗುತ್ತದೆ. ಹೋರಾಟವೆಂದರೆ ಅದು ಅನೇಕ ತರದ ಹೋರಾಟವಿರಬಹುದು. ಹೊಟ್ಟೆಯಪಾಡಿಗಾಗಿ ಹೋರಾಟ, ಸ್ವಾತಂತ್ರ್ಯಕ್ಕಾಗಿ ಹೋರಾಟ ಇನ್ನೂ ನೂರಾರು ತೆರನಾದ ಹೋರಾಟಗಳಿವೆ. ದೇಶಕ್ಕಾಗಿ ದೇಶದ ಸಮಗ್ರ ಕಲ್ಯಾಣಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದರೆ ಮಾತ್ರ ಅದು ಶ್ರೇಯಸ್ಕರ ತನಗಾಗಿ ತನ್ನ ಕುಟುಂಬದ ಹಿತಕ್ಕಾಗಿ ಬಂಧು ಬಾಂಧವರ ಹಿತಕ್ಕಾಗಿ ಹೋರಾಡುವುದರಲ್ಲಿ ಯಾವ ಶ್ರೇಯಸ್ಸೂ ಇರಲಾರದು. ವಿರೂಪಾಕ್ಷಪ್ಪಗೌಡರು ಕಟ್ಟಾ ಆರ್ಯ ಸಮಾಜವಾದಿಗಳಾಗಿದ್ದರೆಂಬುದು ಈ ಮೊದಲೇ ಹೇಳಿದೆ.

ಹೈದ್ರಾಬಾದ್ ಮುಕ್ತಿ ಹೋರಾಟ ಚರಿತ್ರೆಯಲ್ಲಿ ಆರ್ಯ ಸಮಾಜದ ಪಾತ್ರ ಕೈಬಿಟ್ಟರೆ, ಆ ಚಳುವಳಿಯಲ್ಲಿ ಏನೂ ಉಳಿಯುವುದಿಲ್ಲ ಎನ್ನುವಷ್ಟರ ಮಟ್ಟಿಗೆ ದುಡಿದಿದೆ, ಬಲಿದಾನ ನೀಡಿದೆ. ೧೮೯೨ಕ್ಕೂ ಪೂರ್ವದಲ್ಲೇ ಸ್ಥಾಪಿತವಾಗಿರುವ ಆರ್ಯ ಸಮಾಜದ ಸ್ಥಾಪನೆಯ ಉದ್ದೇಶ ಹಿಂದೂ ಸಮಾಜವನ್ನು ಸುಧಾರಿಸುವುದಾಗಿತ್ತು. ಹಿಂದೂ ಸಮಾಜದಲ್ಲಿ ಬೇರೂರಿದ್ದ ಅನಿಷ್ಟ ಕೆಟ್ಟ ಪರಂಪರೆಗಳನ್ನು, ಮೌಢ್ಯಗಳನ್ನು ಕಿತ್ತು ಹಾಕುವುದು, ವರ್ಣಭೇಧ, ಜಾತಿಭೇದಗಳನ್ನು ತೊಲಗಿಸುವುದಾಗಿತ್ತು. ಇಂತಹ ಸಂದರ್ಭದಲ್ಲಿ ರಜಾಕಾರರ ಕೌರ್ಯಕ್ಕೆ ಹಿಂದೂ ಮಹಿಳೆಯರ ಮೇಲಾಗುತ್ತಿದ್ದ ಅತ್ಯಾಚಾರ, ದೌರ್ಜನ್ಯಗಳನ್ನು ಉಗ್ರವಾಗಿ ವಿರೋಧಿಸಿ ಹೋರಾಡಿದ್ದು ಆರ್ಯ ಸಮಾಜ.

ಆರ್ಯಸಮಾಜದ ರಮಾನಂದ ಪಂ. ನರೇಂದ್ರಜಿ ಅವರು ಉಪಾಧ್ಯಕ್ಷರಾಗಿದ್ದರು. ಆಗ ಗುಲಬರ್ಗಾದಲ್ಲಿದ್ದ ವೆಂಕನಗೌಡ ಪಾಟೀಲ ರಾಜನಕೋಳೂರು ಸುರಪುರದಲ್ಲಿದ್ದ ವೀರಪ್ಪ ಸಂಗಪ್ಪ ಗುಳಬಾಳ ಇವರೀರ್ವರೂ ಪೊಲೀಸರ ಬಂಧನದಿಂದ ಬಿಡುಗಡೆಯಾಗಿ ಕೋಳೂರಿಗೆ

ಬಂದಿದ್ದರು. ಅದೇ ಸಮಯದಲ್ಲಿ ವಿರೂಪಾಕ್ಷಪ್ಪಗೌಡರಿಗೆ ಹೈದರಾಬಾದ್ ಸರ್ಕಾರದಿಂದ ವಾರಂಟ್ ಬಂದಿತು. ಈ ಸಮಾಚಾರ ಗೌಡರಿಗೆ ತಿಳಿಯುತ್ತಲೇ ಚತುರಮತಿಯರಾದ ಇವರು ಇಂಗ್ರೇಜಿ ಸರಹದ್ದಿನಲ್ಲಿದ್ದ ಬಂಡೆಪ್ಪನಳ್ಳಿ ಸಾಲವಾಡಗಿಗೆ ಪರಾರಿಯಾದರು. ಸಾಲವಾಡಗಿಯಲ್ಲಿ ತಮಗೆ ಹೆಣ್ಣು ಕೊಟ್ಟ ಮಾವ ಗೌಡಪ್ಪಗೌಡ ಪಾಟೀಲ (ಗುಂಡಕನಾಳ) ಅವರ ಮನೆಯಲ್ಲಿ ಗೌಪ್ಯವಾಗಿ ರಜಾಕಾರರ ಕಣ್ಣು ತಪ್ಪಿಸಿ ಇರಹತ್ತಿದ್ದರು.

ದೇಶ ಪ್ರೇಮಿಯಾಗಿದ್ದ ಗೂರೂಜಿಯವರು ಯುದ್ಧ ನಿಪುಣರಾಗಿದ್ದರು. ಅಂತಯೇ ವಿರೂಪಾಕ್ಷಪ್ಪಗೌಡರು ಒಳ್ಳೇ ಯುದ್ಧ ನೈಪುಣ್ಯವನ್ನು ಪಡೆದರು. ಈ ಮೊದಲು ಗೌಪ್ಯವಾಗಿ ಬಿಜವಾಡಕ್ಕೆ ಹೋಗಿ ಫೈರಿಂಗ್ ಮಾಡುವುದು, ಬಾಂಬ್ ಸ್ಫೋಟಿಸುವ ಕಲೆಯನ್ನು ಕಲಿತು ಬಂದಿದ್ದರೆಂದು ನಮಗೆ ಕೆಲವು ಮೂಲಗಳಿಂದ ತಿಳಿದುಬರುತ್ತದೆ. (ತಾಯಿ ಗೌರಮ್ಮ ಗೌಡಶಾನಿಯವರು ಹೇಳಿದ ಪ್ರಕಾರ) ಯಾವುದೇ ಹೋರಾಟವಾಗಲಿ ಅಥವಾ ಯಾವದೇ ಯೋಜನೆಯಾಗಲಿ ಮಾಡುವ ಮುಂಚೆ ಯೋಚನೆ ಮಾಡಬೇಕಾಗುತ್ತದೆ. ಯಾವ ಆಸೆ ಆಕಾಂಕ್ಷೆಗಳಿಲ್ಲದೇ ರಾಷ್ಟ್ರಪ್ರೇಮಿಯಾದ ನಿಸ್ಪ್ರುಹರಾದ ದೂರದರ್ಶಿಗಳಾದ ಗೂರೂಜಿಯವರು ಸಾಲವಡಿಗಿಯಲ್ಲಿ ವಿರೂಪಾಕ್ಷಪ್ಪಗೌಡರ ಸಹಾಯದಿಂದ ಹತ್ತು ಹಲವಾರು ಸ್ವಾತಂತ್ರ್ಯ ಪ್ರೇಮಿಗಳನ್ನು ಜಮಾಯಿಸಿದರು. ಅಂಥವರಲ್ಲಿ ರಾಜಕಾರಣಿ ಮುತ್ಸದ್ಧಿಗಳಾದ ಹಗರಟಗಿಯ ಬಸವಂತ್ರಾಯಗೌಡ, ಹಣಮಂತ್ರಾಯ, ಹನುಮರಡ್ಡಿ (ಕಾಂಗ್ರೆಸ್) ಕುಪ್ಪಿ, ಹಗರಟಗಿ ಬಸವಂತ್ರಾಯಗೌಡರ ಅಳಿಯಂದಿರಾದ ಶ್ರೀ ಮಹಾಂತಗೌಡ ಗೌಡಪ್ಪಗೌಡರ ಗುರುಬಸಪ್ಪಗೌಡ, ನಿಂಗಪ್ಪಗೌಡ ಕಾಂಗ್ರೆಸ್ (ಗುಳಬಾಳ) ಇನ್ನೂ ಅನೇಕರೊಡನೆ ವಿರೂಪಾಕ್ಷಪ್ಪಗೌಡರು ಸುಮಾರು ಒಂದು ವರುಷದವರೆಗೆ ಕಾಂಗ್ರೆಸ್ ಕೇಂದ್ರವನ್ನು ನಡೆಸಿದರು.

ವಿರೂಪಾಕ್ಷಪ್ಪಗೌಡರ ಹೋರಾಟದ ಕೆಲವು ಘಟನೆಗಳು ಈ ರೀತಿಯಾಗಿವೆ. ಮಾರಲಭಾವಿ ಇದು ಹುಣಸಗಿ ತಾಲ್ಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿ. ಕುಲಕರ್ಣಿ ಎಂಬಾತ ಅಂದಿನ ನಿಜಾಮನ ಹಣದಾಸೆಗೆ ಜೋತುಬಿದ್ದ. ತನ್ನ ಹಳ್ಳಿಯ ಜನತೆಯ ಸುಖ ದುಃಖಗಳನ್ನು ಲಕ್ಷಿಸದೇ ಅವರಿಗೆ ತೊಂದರೆ ಕೊಡುತ್ತಿದ್ದ. ಒಬ್ಬ ಕುಹಕ ವ್ಯಕ್ತಿಯಾಗಿದ್ದ. ಅಂದಿನ ಅಂದರೆ ಇಂದಿಗೆ ಸುಮಾರು



೫೮ ವರುಷಗಳ ಹಿಂದೆ ನಿಜಾಮ ಸರಕಾರಕ್ಕೆ ಕಂದಾಯ (ಮಾಲಗುಜಾರಿ)ದ ಹಣವನ್ನು ಮತ್ತು ಮಹತ್ವದ ದಫ್ತರಗಳನ್ನು ತೆಗೆದುಕೊಂಡು ಹೋಗಿ ತಲುಪಿಸುತ್ತಿದ್ದ. ಅಲ್ಲದೇ ಗ್ರಾಮಗಳ ನಿಜಾಮ್ ವಿರೋಧಿ ವಿಷಯಗಳನ್ನು ಪಠಾಣರಿಗೆ ಹೇಳಿ ಅವರನ್ನು ಸಿಟ್ಟಿಗೆಬ್ಬಿಸಿ ತನ್ನ ಹಿತವನ್ನು ಸಾಧಿಸಿಕೊಳ್ಳುತ್ತಿದ್ದ. ಸಮಾಜ ಘಾತಕ ವ್ಯಕ್ತಿಯಾಗಿದ್ದನೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಹಿಂದುಗಳ ದ್ವೇಷಿಯಾದ ಕ್ರೂರ ರಜಾಕಾರರು ಗ್ರಾಮದಲ್ಲಿನ ಹಲವರ ಕುಹಕ ಮಾತುಗಳನ್ನೇ ನಿಜವೆಂದೇ ನಂಬಿ ಸರಹದ್ದಿನ ಗ್ರಾಮಗಳಾದ ಗುಳಬಾಳ, ಮಾಳನೂರ, ರಾಜನಕೋಳೂರು, ಮುಂತಾದ ಹಳ್ಳಿಗಳ ಜನರಿಗೆ ತೊಂದರೆ ಕೊಡುತ್ತಿದ್ದರಲ್ಲದೆ ಹಾಡ ಹಗಲೇ ಸ್ತ್ರೀ ಪುರುಷರೆನ್ನದೆ, ಕೂಸು ಕುನ್ನಿಗಳೆನ್ನದೇ ಮುದುಕ ಹೀನಾ ಮಾನವಾಗಿ ಅತ್ಯಾಚಾರ, ಹಿಂಸಾಚಾರ ಅಪಮಾನ ಮಾಡುತ್ತ ಮಾನಭಂಗದಂಥ ಕೆಟ್ಟ ಕೆಲಸಗಳನ್ನು ಮಾಡುತ್ತಿದ್ದರು.

ಪಾಪದ ಕಾರ್ಯಗಳೇ ರಜಾಕಾರರಿಗೆ ಪುಣ್ಯದ ಕಾರ್ಯಗಳಾಗಿದ್ದವು. ಹೀಗಾಗಿ ಜನರು ರಜಾಕಾರರನ್ನು ಕಂಡರೇನೇ ಭಯ ಭೀತರಾಗಿ ಪಲಾಯನ ಮಾಡುತ್ತಿದ್ದರು. ಎಲ್ಲಿಗಾದರೂ ದೂರದ ತಮ್ಮ ತಮ್ಮ ನೆಂಟರಿಷ್ಟರ ಊರುಗಳಿಗೆ ಹೋಗುತ್ತಿದ್ದರು.

ಅಂದಿನ ಸ್ಥಿತಿ ಹೀಗಿರುವಾಗ ಒಂದು ದಿನ ಮಹ್ಮದಮೀಯಾ ಮತ್ತು ರಸೂಲ್ ಎಂಬ ತಹಸೀಲ ಚಪರಾಸಿಗಳು ಮಾಲಗುಜಾರಿ ಹಣವನ್ನು ಒತ್ತಾಯ ಪೂರ್ವಕ್ಕಾಗಿ ಜನರಿಂದ ವಸೂಲಿಮಾಡಿ ನಿಜಾಮ ಸರಕಾರಕ್ಕೆ ಮುಟ್ಟಿಸಲೋಸುಗ ಹೋಗುವಾಗ ದಾರಿಯಲ್ಲಿ ಕತ್ತಲಾಯಿತು. ಮಾರಲಭಾವಿ ಕುಲಕರ್ಣಿಯವರ ಮನೆಯಲ್ಲಿದ್ದು ಮುಂಜಾನೆ ಹೋದಾರಾಯಿತೆಂದು ವಿಚಾರಿಸಿ ಅಂದು ರಾತ್ರಿ ಕುಲಕರ್ಣಿಯವರ ಮನೆಯಲ್ಲಿ ಉಳಿದರು.

ಕುಲಕರ್ಣಿಯವರು ತಮ್ಮ ಮನೆಯಲ್ಲಿ ತಂಗಿದ್ದ ಮಹ್ಮದಮೀಯಾ ಮತ್ತು ರಸೂಲ ಅವರಿಗೆ ಊಟ ಉಪಚಾರಗಳನ್ನು ಮಾಡಿಸಿ ತಮ್ಮ ಮನೆಯ ಮಾಳಿಗೆಯ ಮೇಲೆ ಮಲಗುವ ವ್ಯವಸ್ಥೆ ಮಾಡಿದರು.

ರಸೂಲ ಮಹ್ಮದಮೀಯಾ ಕುಲಕರ್ಣಿ ಈ ಮೂವರು ಅಂದು ರಾತ್ರಿ ಸುಮಾರು ೧೨ ಗಂಟೆಯವರೆಗೆ ನಿಜಾಮರ ಮತ್ತು ರಜಾಕಾರರ ಸುದ್ದಿಯನ್ನು ಮಾತನಾಡುತ್ತ ನಿದ್ದೆ ಹೋದರು.

ಈ ಸುದ್ದಿ ವಿರೂಪಾಕ್ಷಪ್ಪಗೌಡರಿಗೆ ತಲುಪಲು ತಡವಾಗಲಿಲ್ಲ. ತನ್ನ ತಂಡದ ನಾಲ್ಕಾರು ಜನರನ್ನು ಕರೆದುಕೊಂಡು ತನ್ನ ಅಚ್ಚುಮೆಚ್ಚಿನ ಮಿತ್ರ ಧೈರ್ಯಶಾಲಿಯಾದ ಹಗರಟಗಿಯ ಮಹಾಂತಗೌಡನನ್ನು ಕರೆದುಕೊಂಡು ಅಂದೇ ರಾತ್ರಿ ಸುಮಾರು ಒಂದು ಗಂಟೆಯಾಗಿರಬಹುದು ಗಡಿಬಿಡಿಯಿಂದ ವೇಷ ಮರೆಸಿಕೊಂಡು ಕುದುರೆ ಏರಿ ಮಾರಲಭಾವಿಗೆ ಬಂದರು.

ಏ ಬದ್ಮಾಸ್ ಕತ್ತಿಯನ್ನು ಮೊದಲು ವರೆಯಲ್ಲಿಡು ಎನ್ನುವಷ್ಟರಲ್ಲಿಯೇ ಹಗರಟಗಿ ಮಹಾಂತಗೌಡನು ಹಿಂದಿನಿಂದ ರಸೂಲನನ್ನು ತೆಕ್ಕೆಯಲ್ಲಿ ಬಿಗಿಯಾಗಿ ಹಿಡಿದನು. ಅಷ್ಟರಲ್ಲಿ ರಸೂಲನ ಖಡ್ಗ ವಿರೂಪಾಕ್ಷಪ್ಪಗೌಡನ ಬಲಗೈಗೆ ತಾಕಿ ರಕ್ತ ಸುರಿಯತೊಡಗಿತು. ಅದನ್ನು ಲಕ್ಷಿಸದೇ ಏಯ್ ನಿಜಾಮನ ಕುನ್ನಿ ಬಾ ಹತ್ತಿರ. ಬಾ ನೀನೂ ಪ್ರಾಣ ಕಳೆದುಕೊಂಡು ನಿನ್ನ ಮನೆಯವರನ್ನೂ ಅನಾಥರನ್ನಾಗಿ ಮಾಡಬೇಕಿದ್ದರೆ ನನ್ನ ಬಳಿಗೆ ಬಾ ಎಂದು ಗೌಡರು ಕಿಡಿಕಿಡಿಗಣ್ಣಿನಿಂದ ನೋಡುತ್ತ, ವೀರಾವೇಶದಿಂದ ಕೂಗಿದರು. ವಿರೂಪಾಕ್ಷಪ್ಪ ಗೌಡರ ಉಗ್ರರೂಪ ಕೈಯಲ್ಲಿದ್ದ ಪಿಸ್ತೂಲು ಧ್ವನಿಯಲ್ಲಿದ್ದ ಗಡಸುತನ ಅಲ್ಲಿದ್ದ ಕುಲಕರ್ಣಿ ಮತ್ತು ರಸೂಲನ ಮೈಯಲ್ಲಿ ಬೆವರಿಳಿಸಿದವು. ಅಷ್ಟರಲ್ಲಿಯೇ ಕುಲಕರ್ಣಿ ಅಂಜಿ ಗಡಗಡನೆ ನಡುಗುತ್ತ ಕೆಳಗೆ ಬಿದ್ದವನೆ ಮನೆಯೊಳಗೆ ಓಡಿ ಹೋದ. ಇದನ್ನು ನೋಡಿ ಎದೆಯೊಡೆದು ನಡುಗುತ್ತ ಮಾತು ಬಾರದೆ ಮಾಳಿಗೆಯ ಮೇಲಿಂದಲೇ ಮಹ್ಮದಮಿಯಾ ಕೆಳಗೆ ಎಗರಿ (ಜಿಗಿದು) ತಿಪ್ಪೆಯ ಮೇಲೆ ಮೂರ್‍ನಾಲ್ಕು ಸುತ್ತ ಲಗಾಟೆ ಹೊಡೆದು ಪರಾರಿಯಾಗಿದ್ದ. ರಸೂಲನನ್ನು ನೋಡಿ ಮಹಾಂತಗೌಡನ ಕಣ್ಣು ಕೆಂಪೇರಿದ್ದವು. ಏಕೆಂದರೆ ಈ ಮೊದಲು ಹಗರಟಗಿಯ ಬಸವಂತ್ರಾಯಗೌಡರನ್ನು ಹಿಡಿದು ರಜಾಕಾರರಿಗೆ ಕೊಡುತ್ತೇನೆಂದು ಹೇಳಿದ್ದನಂತೆ.

ಬಸವಂತ್ರಾಯಗೌಡರು ಆಗಿನ ವಕೀಲರಿಗೇನೇ ಕಾಯ್ದೆ ಹೇಳಿ ಕೊಡುತ್ತಿದ್ದ ಮೇಧಾವಿಯಾಗಿದ್ದರು. ರಜಾಕಾರರನ್ನು ಹೇಗೆ ಪಲಾಯನ ಮಾಡಿಸಬೇಕೆಂಬ ವಿಧಾನಗಳನ್ನು ವಿರೂಪಾಕ್ಷಪ್ಪಗೌಡರಿಗೆ ತಿಳಿಸಿ ಕೊಡುತ್ತಿದ್ದರು. ಹೀಗಾಗಿ ರಜಾಕಾರರು ಹಗರಟಗಿ ಬಸವಂತ್ರಾಯಗೌಡರೆಂದರೆ ಬಲು ಕುಪಿತರಾಗುತ್ತಿದ್ದರು. ಅಷ್ಟೇ ಅಲ್ಲ ಒಂದೆರಡು ಬಾರಿ ಅವರ ಮನೆಗೆ ಲೂಟಿಯನ್ನೂ ಮಾಡಿದ್ದರು. ಇದು ಮಹಾಂತಗೌಡನಿಗೆ ಚೆನ್ನಾಗಿ ತಿಳಿದಿತ್ತು. ಅಂತೆಯೇ ಮಹಾಂತಗೌಡನು



ಮಗನೇ ಬದ್ಮಾಷ್ ನಮ್ಮ ಮಾವನನ್ನು ಹಿಡಿದು ಕೊಡುತ್ತಿಯಾ? ಎಂದವನೇ ತನ್ನ ಕೈಯಲ್ಲಿದ್ದ ಭರ್ಚಿಯಿಂದ ರಸೂಲನ ಹೊಟ್ಟೆಗೆ ಚುಚ್ಚೇ ಬಿಟ್ಟನು. ತಕ್ಷಣವೇ ರಸೂಲ ಕುಸಿದು ಕೆಳಗೆ ಬಿದ್ದನು. ರಸೂಲನ ಕರುಳು ಹೊರಗೆ ಬಿದ್ದವು. ಒದ್ದಾಡಿದ ಹಾಗೇ ರಕ್ತ ಸುರಿಯುತ್ತಿತ್ತು. ಅಷ್ಟರಲ್ಲಿ ಮತ್ತೆರಡು ಬಾರಿ ವಿರೂಪಾಕ್ಷಪ್ಪಗೌಡನು ಥಕ್ಕನೆ ಒದ್ದು ತೆಕ್ಕೆ ಬಡಿದು ಎತ್ತಿ ಮಾಳಿಗೆಯ ಮೇಲಿಂದ ಕೆಳಕ್ಕೆ ತೂರಿಬಿಟ್ಟನು. ರಸೂಲನ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಕೂಡಲೆ ಅವನ ಖಡ್ಗ, ಮಾಲಗುಜಾರಿ ಹಣ ಮತ್ತು ಮಹತ್ವದ ದಫ್ತರ್‌ಗಳನ್ನು ತೆಗೆದುಕೊಂಡು ನೇರವಾಗಿ ಕುದುರೆಯನ್ನೇರಿ ಸಾಲವಾಡಗಿಗೆ ಮರಳಿದರು.

ಆಗ ಸಮಯ ಬೆಳಗಿನ ನಾಲ್ಕು ಗಂಟೆಯಾಗಿತ್ತು.

ಮಾರಲಭಾವಿಯ ಘಟನೆ ಘಟಿಸಿದ ಕೆಲವೇ ದಿನಗಳಲ್ಲಿ ಎಣ್ಣೆವಡಗೇರಿ ಯಲ್ಲಿ ಮತ್ತೊಂದು ಘಟನೆ ಜರುಗಿತು.

ಎಣ್ಣೆವಡಗೇರಿ ಹುಣಸಗಿ ತಾಲೂಕಿನ ಒಂದು ಚಿಕ್ಕ ಹಳ್ಳಿ. ನಾರಾಯಣಪುರಕ್ಕೆ ತೀರ ಹತ್ತಿರಲ್ಲಿದೆ. ಈ ಹಳ್ಳಿಯಲ್ಲಿ ಗೆದ್ಲಯ್ಯ ಇಳಿಗೇರ ಹಗರಗುಂಡ ಎಂಬುವನು ಸಿಂಧಿಯ ವ್ಯಾಪಾರ ಮಾಡುತ್ತಿದ್ದನು. ಅಂದಿನ ಆ ಅವಧಿಯಲ್ಲಿ ಸಿಂಧಿಯ ವ್ಯಾಪಾರ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿತ್ತು. ಎಲ್ಲಿ ನೋಡಿದರಲ್ಲಿ ಈಚಲ ಗಿಡಗಳ ಗುಂಪೇ ಗುಂಪು. ಆ ಗುಂಪು ಸದಾಕಾಲ ಹಚ್ಚ ಹಸುರಾಗಿ ನಿಚ್ಚಳವಾಗಿ ಮನಕ್ಕೆ ಮುದವನ್ನೀಯುತ್ತಿದ್ದವು ಎಂದರೆ ಉತ್ಪ್ರೇಕ್ಷೆಯಾಗಲಾರದು.

ಸಿಂದಿಯನ್ನು ಊರೂರು ಅಲೆದಾಡಿ ಕತ್ತೆ ಮೇಲೋ ಅಥವಾ ಕುದುರೆ, ಕೋಣಗಳ ಮೇಲೇಯೋ ಚೀಲದಲ್ಲಿಯೇ ಹೇರಿಕೊಂಡು ಮಾರಿ ಬರುವ ರೂಢಿಯಿತ್ತು. ಅದರಂತೆ ಈಳಿಗರ ಗೆದ್ಲಯ್ಯನೆಂಬವನೂ ಕೂಡಾ ಆ ದಿನದಲ್ಲಿ ಪ್ರಸಿದ್ಧ ಸಿಂದಿಯ ವ್ಯಾಪಾರಿಯಾಗಿದ್ದ. ಗೆದ್ಲಯ್ಯನ ಹತ್ತಿರ ಆರು ಕುದುರೆ ಇದ್ದವು. ಅದೇ ಗ್ರಾಮದಲ್ಲಿ ಬಸಣ್ಣನೆಂಬುವನು ತನ್ನ ಪುಢಾರಿತನದಿಂದ ರೌಡಿ ರಂಗಣ್ಣನಾಗಿದ್ದನು.

ಜನರನ್ನು ಅಂಜಿಸಿ ಅನ್ಯಾಯುವಾಗಿ ಅವರಿಂದ ಹಣವನ್ನು ತೆಗೆದುಕೊಳ್ಳುತ್ತಿದ್ದ. ಅವನ ಕಾಟಕ್ಕೆ ಅಂಜಿ ಬೇಸತ್ತ ಜನ ಪರ ಊರುಗಳಿಗೆ ಹೋಗಿ ವಾಸವಾಗಿದ್ದರು. ಬಸಣ್ಣನಿಗಂಜಿ ಗೆದ್ದಲಯ್ಯನೂ ಕೂಡಾ ಊರು ತೊರೆದಿದ್ದ. ವ್ಯಾಪಾರವಂತೂ ನಿಂತು ಹೋಗಿತ್ತು. ಮುಂದೆ ನನ್ನ ಬದುಕಿನ ಗತಿ ಏನು? ಎಂಬುದರ ಬಗ್ಗೆ ಚಿಂತಿಸಿ ಕೊರಗಿ ಸಣ್ಣಾಗಿ ಹೋಗಿದ್ದ ಪುಢಾರಿ ಬಸಣ್ಣನನ್ನು ಎದುರು ಹಾಕಿಕೊಂಡು ಬಾಳುವ ತಾಕತ್ತು ಗೆದ್ದಲಯ್ಯನಲ್ಲಿರಲಿಲ್ಲ.

ಮರುದಿನ ಮುಂಜಾನೆ ಸುಮಾರು ೧೦ ಗಂಟೆಯಾಗಿರಬಹುದು. ಗೆದ್ದಲಯ್ಯ ಕಾಲನಡಿಗೆಯಿಂದಲೇ ಸಾಲವಾಡಗಿಗೆ ಬಂದನು. ಮೈ ಬಗಿ ಹಿಡಿದು ವಿನಯದಿಂದ ಜೋಲು ಮುಖಮಾಡಿ ಕಾಂಗ್ರೆಸ್ ಕೇಂದ್ರದಲ್ಲಿ ಕುಳಿತಿದ್ದ ವಿರೂಪಾಕ್ಷಪ್ಪಗೌಡರನ್ನು ಕಾರ್ಯಕರ್ತರನ್ನೊಳಗೊಂಡು ಭೇಟಿಯಾದನು.

ವಡಗೇರಿಯಿಂದ ಗೆದ್ದಲಯ್ಯ ಬಂದಿದ್ದಾನೆ ಎಂಬ ಸುದ್ದಿ ತಿಳಿಯಿತು. "ಏನು ಸಮಾಚಾರ ಗೆದ್ದಲಯ್ಯ? ಇಲ್ಲಿಗೇಕೆ ಬಂದೆ? ಎಂದು ಕೇಳಿದ ವಿರೂಪಾಕ್ಷಪ್ಪಗೌಡರಿಗೆ ಗೆದ್ದಲಯ್ಯ ಹೀಗೆ ಹೇಳುತ್ತಾನೆ, ಏನು ಮಾಡುವುದು ಗೌಡರೆ ಬಸಣ್ಣನು ನನ್ನನ್ನು ಊರು ಬಿಡಿಸಿ ಓಡಿಸಿದ್ದಾನೆ. ನನ್ನ ಬದುಕಿಗೆ ಆಧಾರವಾಗಿದ್ದ ಕುದುರೆಗಳನ್ನು ಕಸಿದುಕೊಂಡುದುದಲ್ಲದೇ ಇದ್ದ ಹಣವನ್ನೆಲ್ಲ ಜಪ್ತಿ ಮಾಡಿಬಿಟ್ಟಿದ್ದಾನೆ.

ಅದೇ ಆಗ ತನ್ನ ಗೆಳೆಯರ ಜೊತೆ ಹರಟೆ ಹೊಡೆದು ನಿಜಾಮನ ಬಗ್ಗೆ ಹೆಮ್ಮೆಯಿಂದ ಏನೇನೋ ಮಾತನಾಡುತ್ತ ಪಠಾಣರಂತೂ (ರಜಾಕಾರರು) ನಮ್ಮ ಮಾತು ಕೇಳುತ್ತಾರೆ. ಯಾರೇನು ಮಾಡುವರು ನಮಗೆ? ಖಾನಾ, ಪೀನಾ ಸೋನಾ ಮಜಾ ಉಡಾನಾ ಎಂದು ಮತ್ತೇರಿದ ಮಧಾಂದರು ಮಾತಾನಾಡುತ್ತ ಮಲಗಬೇಕೆಂದು ಹಾಸಿಗೆಯಲ್ಲಿ ಒರಗುತ್ತಿದ್ದಂತೆಯೇ ಒಮ್ಮಿಂದೊಮ್ಮೆಯೇ ಜನರ ಹಾಹಾಕಾರದ ಧ್ವನಿ ಬಸಣ್ಣನಿಗೆ ಕೇಳಿಸಿತು.

ಇಂಥ ಮಧ್ಯರಾತ್ರಿಯಲ್ಲಿ ನಮ್ಮೂರಿಗೆ ಯಾರು ಬಂದಿರಬಹುದು? ಎಂದು ಬಸಣ್ಣನ ತರ್ಕ ಮಾಡುವಷ್ಟರಲ್ಲಿಯೇ ಕಾಂಗ್ರೆಸ್ ಕಾರ್ಯಕರ್ತರು ಮನೆ ಮುಂದೆ ಹಿಂದೆ ಕಾವಲಾಗಿ ನಿಂತರು. ಈ ಸನ್ನಿವೇಶವನ್ನು ಕಂಡು



ಬೆಚ್ಚಿಬಿದ್ದ ಕೂಡಲೇ ಕೋಪಾವೇಶದಿಂದ ಮನೆಯ ಮಾಳಿಗೆಯನ್ನೇರಿ ಕೂಗಾಡಿದ, ಊರ ಜನರನ್ನು ಕರೆದ ಯಾರು ಬರಬೇಕು? ಬೇಡಾದ ವ್ಯಕ್ತಿಯ ಸಹಾಯಕ್ಕೆ ಅದಾರು ಬಂದಾರು? ಯಾರು ಧ್ವನಿಗೂಡಲಿಲ್ಲ. ಬಸಣ್ಣನು ರೇಗುತ್ತ.

ಎಲೇ ಬದ್ಮಾಸರೇ, ನಾನು ಯಾರೆಂದು ತಿಳಿದಿದ್ದೀರಿ ಈಗಿಂದಿಗಲೇ ಪಠಾಣರನ್ನು ಕರೆಸಿ ನಿಮ್ಮನ್ನೆಲ್ಲ ನಾಶಮಾಡಿಸುತ್ತೇನೆ. ನನ್ನನ್ನು ಮುಟ್ಟುವ ತ್ರಾಣ ಇಲ್ಲಾರಿಗಿದೆ? ಹೆಡೆಬಿಚ್ಚಿದ ಹಾವಿನಂತೆ ಬುಸುಗುಟ್ಟಿದ. ಮೊದ ಮೊದಲು ವಿರೂಪಾಕ್ಷಪ್ಪಗೌಡರು ಸುಮ್ಮನಿದ್ದಂತೆ ನಟಿಸಿ ಒಮ್ಮೆಲೇ ಗಾಳಿಯಲ್ಲಿ ಗುಂಡು ಹಾರಿಸಿದರು. ದುಷ್ಟನಿಗೆ ಶಿಕ್ಷಯಾಗಲೇಬೇಕು. ದೇವರು ದೊಡ್ಡಾತ ಬಸಣ್ಣನ ಪಾಪದ ಕೊಡ ತುಂಬಿತ್ತು. ಪಾಪಿಷ್ಟ ಸಾಯಲೇಬೇಕೆಂದು ತಮ್ಮ ತಮ್ಮಲ್ಲಿ ಮಾತನಾಡಿ ಕೊಂಡರು.

ಗುಂಡಿನ ಸದ್ದು ಕೇಳಿದೊಡನೇ ಬಸಣ್ಣನ ಮನೆಯಲ್ಲಿ ಕುಳಿತುಕೊಂಡಿದ್ದ ಆತನ ಅನುಯಾಯಿಗಳಯ (ಬೆಂಬಲಿಗರು) ಮಾಳಿಗೆಯನ್ನೇರಿ ಕೂಡಿಟ್ಟ ಕಲ್ಲು ಗುಂಡುಗಳನ್ನು ಮನೆಯ ಕೆಳಭಾಗದಲ್ಲಿ ನಿಂತಿದ್ದ ವಿರೂಪಾಕ್ಷಪ್ಪಗೌಡರ ಗುಂಪಿನತ್ತ ಬಿಸಾಡ ಹತ್ತಿದರು. ಅವರು ಮಾಳಿಗೆ ಮೇಲೆ ಇವರು ಕೆಳಗೆ ಕಲ್ಲಿನ ಮಳೆ ಗರೆದರು.

ಇದಕ್ಕೆಲ್ಲ ಕೊಳ್ಳೂರಿನ ಕೇಸರಿ ವಿರೂಪಾಕ್ಷಪ್ಪಗೌಡ ಅಂಜುವವರೇ ಅದಕ್ಕೆ ಪ್ರತಿಯಾಗಿ ಗುಂಡಿನಿಂದ ಉತ್ತರಿಸಿದರು. ಬಿರುಸಾಗಿ ಬರುತ್ತಿದ್ದ ಗುಂಡುಗಳನ್ನು ತಪ್ಪಿಸಿಕೊಳ್ಳುತ್ತ ಮೇಲಿಂದ ಕಲ್ಲಿನ ಮಳೆಗೆರೆದರು. ಬಸಣ್ಣ ಹೆದರಿ ತನ್ನಲ್ಲಿದ್ದ ದೊಡ್ಡ ಬ್ಯಾಟ್ರಿಯಿಂದ ಕೆಳಗಿದ್ದವರನ್ನು ನೋಡಿದ. ಕೆಳಗಿದ್ದ ಧೀರರನ್ನು ಕಂಡು ಹೆದರಿದ. ಇವರು ವಿರೂಪಾಕ್ಷಪ್ಪಗೌಡರೇ ಎಂದು ಮನಸ್ಸಿಗೆ ಖಾತ್ರಿ ಮಾಡಿಕೊಂಡ. ಇನ್ನೂ ನನಗೆ ಉಳಿಗಾಲವಿಲ್ಲವೆಂದು ಮತ್ತಷ್ಟು ದೊಡ್ಡ ಧ್ವನಿ ತೆಗೆದು ಕೂಗಿ ಗ್ರಾಮದ ಜನರನ್ನು ಕೂಗಿದ ಎಚ್ಚರಿಸಿದ ಆದರೆ ಯಾರೂ ತನ್ನ ಸಹಾಯಕ್ಕೆ ಬರುವ ಲಕ್ಷಣ ಕಾಣಲಿಲ್ಲ.

ಇದನ್ನು ಕಂಡ ಸಗರದ ಅಚ್ಚಪ್ಪಗೌಡರು ಈತನು ಹೇಗಾದರೂ ನಮ್ಮ ಕೈಯಲ್ಲಿ ಸಿಗುವದಿಲ್ಲ. ತಡಮಾಡಿದರೆ ರಜಾಕಾರರು ಬಂದು ನಮ್ಮನ್ನು ಉಳಿಗೊಡುವದಿಲ್ಲ ಎಂದು ಹೇಳಿದರು.

"ದುಷ್ಟರನ್ನು (ದೇಶದ್ರೋಹಿಗಳನ್ನು) ಶಿಕ್ಷಿಸುವದು, ಶಿಷ್ಟರನ್ನು ರಕ್ಷಿಸುವುದು" ನಮ್ಮ ಮೊದಲ ಆದ್ಯತೆ. ತಡ ಮಾಡಿದರೆ ಕೆಲಸ ಕೆಡುವುದೆಂದು ತಿಳಿದು ತಕ್ಷಣವೇ ತನ್ನ ಕೈಯಲ್ಲಿದ್ದ ೨೮ ಗುಂಡುಗಳ ಸ್ಟ್ಯಾಂಡಗನ್ ಉಪಯೋಗಿಸಿದ ಮೊದಲಿಗೆ ಬಸಣ್ಣ ಗುಂಡಿಗೆ ಆತ್ಮಾಹುತಿಯಾದ. ನಂತರ ಸಾಯಬಣ್ಣ ಕಿರುಚುತ್ತ ಒದ್ದಾಡುತ್ತ ತನ್ನ ಪ್ರಾಯಶ್ಚಿತವನ್ನು ಅನುಭವಿಸಿದ.

ಅಷ್ಟರಲ್ಲಿಯೇ ಅದಾವುದೋ ಸುಳುವಿನಿಂದ ಈ ಸುದ್ದಿಯನ್ನು ತಿಳಿದ ಕ್ರೂರ ಪಠಾಣರು ವಿರೂಪಾಕ್ಷಪ್ಪಗೌಡರ ಗುಂಪಿನ ಮೇಲೆ ಧಾವಿಸಿ ಬಂದರು. ಅಷ್ಟರಲ್ಲಿಯೇ ವೀರಯೋಧನಂತಿದ್ದ ವಿರೂಪಾಕ್ಷಪ್ಪಗೌಡರು, ತಮ್ಮ ಕ್ರಾಂತಿಕಾರಿ ಗುಂಪನ್ನು ತೆಗೆದುಕೊಂಡು ವಡಗೇರಿಯಿಂದ ಬಹುದೂರ ಹೋಗಿದ್ದರು.

ಮಾರನೆಯದಿನ ವಡಗೇರಿಯ ಜನರಿಗೆ ಹೊಳಿಗೆಯುಂಡಷ್ಟು ಹರುಷ. ಸುತ್ತಲಿನ ಹಳ್ಳಿಗಳ ಜನರೂ ಸಹಿತ ನೆಮ್ಮದಿಯ ಉಸಿರನ್ನು ಬಿಟ್ಟರು. ವಿರೂಪಾಕ್ಷಪ್ಪಗೌಡರನ್ನು ಹಾಡಿ ಹರಿಸಿದರು. ಗೆದ್ದಲಯ್ಯ ಕೊನೆಗೂ ಗೆದ್ದ ಬಸಣ್ಣ ಬಿದ್ದ. ತಾನು ಕಳೆದುಕೊಂಡಿದ್ದ ಆರು ಕುದುರೆಗಳನ್ನು ಮರಳಿ ಪಡೆದ.

ಸುಮಾರು ೫೮ ವರುಷಗಳ ಹಿಂದಿನ ಒಂದು ನೈಜ ಘಟನೆ "ಜನನಿ ಜನ್ಮ ಭೂಮಿಚ್ಚ ಸ್ವರ್ಗಾದಪಿ ಗರೀಯಸಿ" ಎನ್ನುವಂತೆ ರಾಜನಕೋಳೂರು ವಿರೂಪಾಕ್ಷಪ್ಪಗೌಡರ ಜನ್ಮಸ್ಥಳ ಗೆಳೆಯರೊಡನೆ ಕೂಡಿ ಆಡಿ ಬೆಳೆದ ಊರು.

ಅರುಣೋದಯದ ಸಮಯ, ನಸುಕಿನಲ್ಲೆದ್ದು ವ್ಯಾಯಾಮಮಾಡಿ ಬಚ್ಚಲ ಮನೆಗೆ ಬಂದು ಸ್ನಾನಮಾಡಿ ಅಲ್ಪೋಪ ಆಹಾರವನ್ನು ಮುಗಿಸಿ ಅದೇ ಆಗ ಅಟ್ಟದ ಮೇಲೆ ವಿಶ್ರಮಿಸಬೇಕೆಂದು ಮೆಟ್ಟಲುಗಳನ್ನೇರುತ್ತಲೇ

"ರಾಜನಕೋಳೂರಲ್ಲಿ ರಜಾಕಾರರ ತಂಡ ಬೀಡುಬಿಟ್ಟಿದೆ ಎಲ್ಲಿ ನೋಡಿದರಲ್ಲಿ ಗಡಿಬಿಡಿ ಜನರ ಮೈಮನಗಳಲ್ಲಿ ಭಯ ತುಂಬಿದೆ ಜನರು ಹೌಹಾರಿದ್ದಾರೆ."



ಎಂದು ಓರ್ವ ದಷ್ಟಪುಷ್ಟ ವ್ಯಕ್ತಿ ಬಂದು ವಿರೂಪಾಕ್ಷಪ್ಪಗೌಡರಿಗೆ ಹೇಳಿದ. ಹೇಳುವುದೊಂದೇ ತಡ ಗೌಡರ ಮೈಮನಗಳಲ್ಲಿ ನರ ನಾಡಿಗಳಲ್ಲಿ ರಕ್ತ ಕುದಿಯಿತು ಕಣ್ಣು ಕೆಂಪೇರಿದವು.

ಏಯ್ ಪಠಾಣ (ರಜಾಕಾರ) ಕುನ್ನಿಗಳೆ, ಇಲ್ಲಿಯವರೆಗೂ ಬಂದಿರಾ? ನಿಮ್ಮ ಪುಣ್ಯ ಸರಿದಂತೆ ತೋರುತ್ತದೆ. ಆಗಲಿ ನಾನು ನಿಮಗಾಗಿ ನಿಮ್ಮ ಅಳಿವಿಗಾಗಿ ನನ್ನ ಪ್ರಾಣವನ್ನೇ ಮುಡುಪಾಗಿಟ್ಟಿದ್ದೇನೆ. ಇನ್ನೇಕೆ ತಡ ಎಂದು ಹೇಳಿದವರೇ ಒಮ್ಮಲೇ ಮೇಲೆದ್ದರು, ಆಗ ನೋಡಬೇಕು ಗೌಡರ ಸ್ವರೂಪ ಅವರ ಹಾರಾಟ ಕೂಗಾಟ, ಕಿರುಚಾಟ ಆರ್ಭಟ ಇದನ್ನು ಕಂಡು ಮನೆಯ ಜನ ಆಶ್ಚರ್ಯಚಕಿತರಾದರು. ಅವರಿಗೆ ಉತ್ತರ ಕೊಡುವ ತ್ರಾಣ ಯಾರಿಗೂ ಬರಬೇಕು? ಎಲ್ಲರೂ ಮೌನ.

ಅಂದು ಗೌಡರ ಮನಸ್ಸು ನಿಂತಲ್ಲಿ ನಿಲ್ಲಲಿಲ್ಲ. ಹೊಯ್ದಾಡಹತ್ತಿತ್ತು. ಮಲಗಿದರೆ ನಿದ್ದೆ ಇಲ್ಲ. ಊಟ ಮಾಡಬೇಕೆಂದರೆ ಊಟ ಹಿಡಿಸದು, ಗೌಡರ ಮನಸ್ಸೆಲ್ಲ ಪಠಾಣರ ಚಲವಲನದ ಕಡೆಗೆ ಕೊನೆ ನಿರ್ಧಾರ. ಇಂದು ರಾತ್ರಿ ಕೋಳೂರಿಗೆ ಹೋಗಲೇಬೇಕು. ಏನಾದರೂ ಒಂದು ಕೆಲಸ ಮಾಡಬೇಕು. ಅಂದಾಗ ನನ್ನ ಮನಸ್ಸಿಗೆ ಶಾಂತಿ. ಇದಕ್ಕಿಂತಲೂ ಪೂರ್ವದಲ್ಲಿ ನಾನು ಮಾಡಬೇಕಾದ ಕೆಲಸ ನಾಡ ದ್ರೋಹಿ, ಗ್ರಾಮ ದ್ರೋಹಿ, ನಿಜಾಮರ ಬಾಲಬಡಕನೊಬ್ಬನನ್ನು ಮುಗಿಸಿ ಬಿಡುವುದು ರಾತ್ರಿಯಾಗುವದೊಂದೇ ತಡ ಯಾರಿಗೂ ಹೇಳದೇ ಕೇಳದೆ ಕುದುರೆಯನ್ನೇರಿ ಸಾಲವಾಡಗಿಯಿಂದ ನೇರವಾಗಿ ಗೌಡರು ಕೋಳೂರಿಗೆ ಪ್ರಯಾಣ ಬೆಳೆಸಿದರು. ನಿಜಾಮರ ಬಾಲಬಡಕನೊಬ್ಬನು ತಮ್ಮೂರಿನ (ರಾಜನಕೋಳೂರಿನ) ಮತ್ತು ಸುತ್ತಲಿನ ಕೆಲವು ಹಳ್ಳಿಗಳ ಕಂದಾಯ ಮತ್ತು ಮಹತ್ವದ ದಪ್ತರಗಳನ್ನು ಅನ್ಯಾಯವಾಗಿ ಈ ನಿಜಾಮ ಸರಕಾರದ ರಜಾಕಾರರ ಮುಖ್ಯಾಧಿಕಾರಿಗಳಿಗೆ ಮುಟ್ಟಿಸುತ್ತಿದ್ದ. ಒಬ್ಬ ದ್ರೋಹಿ ಪಠಾಣರ ಬೆಂಬಲದಿಂದ ಗ್ರಾಮದ ಜನರನ್ನೇ ಹೆದರಿಸುತ್ತಿದ್ದ. ಅನ್ಯಾಯ ಅತ್ಯಾಚಾರಿಗಳಿಗೆ ಎಣಿಕೆಯಿಲ್ಲ. ಯಾರೂ ಅವನನ್ನು ಕೇಳುವಂತಿಲ್ಲ. ಕೆಣಕುವಂತಿಲ್ಲ. ಈತನಿಗಂಜಿ ಕೋಳೂರಿನ ಜನರು ತಮ್ಮ ಆಸ್ತಿ–ಪಾಸ್ತಿಗಳನ್ನು ತೊರೆದು ಜೀವ ಉಳಿದರೆ ಸಾಕು ಎನ್ನುತ್ತ ಬೇರೆ ಬೇರೆ ಕಡೆಗೆ ತಮಗೆ ಅನುಕೂಲವಾದ ಬಂಧು ಬಾಂಧವರ ಗ್ರಾಮಗಳಿಗೆ ಪಲಾಯನ ಮಾಡಿದ್ದರು. ಇದನ್ನು ಗೌಡರು ಕಂಡು ಚಂಗನೆ

ಮೇಲೆದ್ದರು ಗೌಡರ ಮೇಲೆ ಎರಗಿದ. ಆತನಿಗೂ ಗೌಡರಿಗೂ ಕೈ ಕೈ ಹತ್ತಿತ್ತು. ವೀರ ಧೀರ ವಿರೂಪಾಕ್ಷಪ್ಪಗೌಡರು ಒಮ್ಮೆಲೇ ಆತನ ಎದಗೆ ಜೋರಾಗಿ ಒದ್ದು ಕೆಳಗೆ ಬೀಳಿಸಿದರು. ಒಮ್ಮೆ ಆತನದು ಮೇಲುಗೈಯಾದರೆ ಮಗದೊಮ್ಮೆ ಗೌಡರ ಮೇಲುಗೈ ಮಖಾಮುಖಿ ಸಮರ ಹತ್ತು ಹದಿನೈದು ನಿಮಿಷಗಳವರೆಗೆ ದ್ರೋಹಿಯೊಡನೆ ಹೋರಾಡಿದರು. ಇವರೀರ್ವರು ಹೋರಾಟದ ಸಮಾಚಾರ ಪಠಾಣರಿಗೆ ಗೊತ್ತಾಗಲು ತಡವಾಗಲಿಲ್ಲ. ವಿರೂಪಾಕ್ಷಪ್ಪಗೌಡರಿಗೆ ಪಠಾಣರ ಬರುವಿಕೆಯು  ತತ್ ಕ್ಷಣದಲ್ಲಿ ತಿಳಿದು, ಇನ್ನು ಪಠಾಣರು ನನ್ನ ಬಳಿಗೆ ಬಂದರೆ ಕೆಲಸ ಕೆಡಬಹುದೆಂದು (ಏಕೆಂದರೆ ಗೌಡರು ಸಾಲವಾಡಗಿಯಿಂದ ಒಬ್ಬರೇ ಬಂದಿದ್ದರು.) ತನ್ನಲ್ಲಿಟ್ಟುಕೊಂಡಿದ್ದ ಕಿರುಗತ್ತಿಯಿಂದ ದ್ರೋಹಿಯ ಮೂಗನ್ನು ಕತ್ತರಿಸಿ ಹಾಕಿದರು. ಅವನನ್ನು ಮುಗಿಸಿಯೇ ಬಿಡಬೇಕೆನ್ನುಷ್ಟರಲ್ಲಿ ಅತ್ತ ಪಾಠಣರಿಂದ ಮದ್ದು ಗುಂಡಗಳ ಸದ್ದು ಸಮೀಪಕ್ಕೆ ಕೇಳಿಬರುತ್ತದೆ. ಹಾಗೆಯೇ ಅವಸರದಿಂದ ಕುದುರೆಯನ್ನೇರಿ ನೇರವಾಗಿ ವೇಗದಿಂದ ಸಾಲವಾಡಿಗೆ ಬಂದರು.

ಗೌಡರ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದ ಆತನ ಸಂಗಡಿಗರು ಗೌಡರನ್ನು ಕಂಡು ಹರ್ಷಿತರಾದರು. ಅವರು ಮಾಡಿ ಬಂದ ಕಾರ್ಯವನ್ನು ಕೇಳಿ ಖುಷಿಪಟ್ಟು ಹೆಮ್ಮೆಪಟ್ಟರು.

ಕಿತ್ತೂರಿನಂತಹ ಚಿಕ್ಕ ಸಂಸ್ಥಾನವು ತಮ್ಮ ವಶವಾಗದೇ ಇದ್ದದ್ದು ಬ್ರಿಟಿಷರಿಗೆ ನುಂಗಲಾರದ ತುತ್ತಾಗಿತ್ತು. ಹೇಗಾದರೂ ಮಾಡಿ ವಶಪಡಿಸಿಕೊಳ್ಳಲು ಹೊಂಚು ಹಾಕುತ್ತಿದ್ದ ಬ್ರಿಟಿಷರಿಗೆ ಸ್ವಾಮಿದ್ರೋಹಿಗಳಾದ ಮಲ್ಲಪ್ಪಶೆಟ್ಟಿ ಮತ್ತು ವೆಂಕಟರಾಯರ ಪಿತೂರಿಯಿಂದಾಗಿ ಕಿತ್ತೂರು ಸಂಸ್ಥಾನ ಹಾಳಾಗಿಹೋಯಿತು. ಅದರಂತೆ ನಮ್ಮ ಸರಹದ್ದುಗಳಲ್ಲಿ ಹಲವಾರು ಹಳ್ಳಿಗಳ ಸಂಪತ್ತು ಕೊಳ್ಳೆ ಹೊಡೆಯಬೇಕೆಂಬ ರಜಾಕಾರರ ದುರಾಸೆಗೆ ಗ್ರಾಮದ್ರೋಹಿಗಳಾದ ಅಲ್ಲದೇ ಇನ್ನೂ ಹತ್ತು ಹಲವಾರು ದ್ರೋಹಿಗಳು ಪ್ರೇರಕರಾಗಿದ್ದರು. ಅಂದಾಗ ನಮ್ಮ ನಾಡು ನಮ್ಮ ದೇಶ ಉಳಿಯುವುದೆಂತು?

ಹೇಗೆ ರಾಜಾ ವೆಂಕಟಪ್ಪನಾಯಕ, ಸಂಗೊಳ್ಳಿ ರಾಯಣ್ಣ, ಹಮ್ಮಿಗಿ ಕೆಂಚನಗೌಡ, ಮುಂಡರಗಿ ಭೀಮರಾಯ, ಸಿಂಧೂರ ಲಕ್ಷ್ಮಣರಂತಹ ಕ್ರಾಂತಿವೀರರ ಹೆಸರು ಕೇಳಿದರೆ ಬ್ರಿಟಿಷರ ಎದೆಗುಂಡಿಗೆ ನಡುಗುತ್ತಿತ್ತೊ ಹಾಗೆಯೇ



ಈ ಚರಿತ್ರೆ ನಾಯಕರಾದ "ಕೋಳೂರು ಕೇಸರಿ ಶ್ರೀ ವಿರೂಪಾಕ್ಷಪ್ಪಗೌಡರ" ಹೆಸರನ್ನು ಕೇಳಿದರೆ ಸಾಕು ರಜಾಕಾರರ ಮೈ ನಡುಗುತ್ತಿತ್ತು ಎಂದು ಹೇಳುವ ಮಾತಿನಲ್ಲಿ ಸತ್ಯಾಂಶವಿದೆ. ಹಾಗೆಂದೇ ನಿಜಾಮ ಸರಕಾರವು ವಿರೂಪಾಕ್ಷಪ್ಪಗೌಡರನ್ನು ಹಿಡಿದು ಕೊಟ್ಟವರಿಗೆ ೧,೦೦೦/– ಬಹುಮಾನ ಕೊಡುವುದಾಗಿ ಡಂಗುರ ಸಾರಿದ್ದರು. ಈಗಿನ ೧೦೦೦/– ರೂ ಅಂದು ಲಕ್ಷದ ಮೌಲ್ಯವನ್ನು ಹೊಂದಿತ್ತು.

ವಿರೂಪಾಕ್ಷಪ್ಪಗೌಡರು ಪಠಾಣರು ಬೀಡು ಬಿಟ್ಟ ಹಳ್ಳಿಗಳ ಮೇಲೆ ಮೇಲಿಂದ ದಾಳಿ ಮಾಡುವುದನ್ನು ಕಂಡು ಪಠಾಣರು (ರಜಾಕಾರರು) ದಂಗಾಗಿದ್ದರು. ಪ್ರಾಣಕ್ಕೆ ಹೆದರದೇ ಎಂಟೆದೆಯ ಭಂಟನಾಗಿ ಹೋರಾಟ ಮಾಡುತ್ತಿದ್ದ ಗೌಡರು "ನಾನು ಸಾಯುತ್ತೇನೆ ಆದರೆ ಬಗ್ಗುವದಿಲ್ಲ" ವೆಂದು ಆಗಾಗ ತಮ್ಮ ಸಂಗಡಿಗರಿಗೆ ಹೇಳುತ್ತಿದ್ದರು.

ಹೈದ್ರಾಬಾದ್ ಸಂಸ್ಥಾನದ ವಿಮೋಚನೆಗಾಗಿ ಹೋರಾಡಿ ಇತಿಹಾಸ ಪುಟದಲ್ಲಿ ತಮ್ಮ ಹೆಸರನ್ನು ಅಚ್ಚಳಿಯದಂತೆ ಮಾಡಿ ಹೋದ ಸ್ವಾತಂತ್ರ್ಯ ಪ್ರೇಮಿಗಳಲ್ಲಿ ವಿರೂಪಾಕ್ಷಪ್ಪಗೌಡರ ಸಹಪಾಠಿಗಳಾಗಿ ಹೋರಾಡಿದ ಶ್ರೇಯಸ್ಸು ಸ್ವಾತಂತ್ರ್ಯ ಹೋರಾಟಗಾರ **ದುಮ್ಮದ್ರಿ ಶರಣಗೌಡ**ರಿಗೆ ಸಲ್ಲುತ್ತದೆ. ಅವರನ್ನೆಲ್ಲ ಸ್ಮರಿಸದಿದ್ದರೆ, ಹೈದ್ರಾಬಾದ್ ಕರ್ನಾಟಕದ ಜನರು ಕೃತಘ್ನರಾದಾರು.

ಹುಣಸಗಿ, ಮಾಳನೂರ, ಮಾರಲಭಾವಿ, ಗುಳಬಾಳ, ಬನಹಟ್ಟಿ, ರಾಜನಕೊಳ್ಳೂರು, ಕುಪ್ಪಿ, ದ್ಯಾಮನಾಳ, ಕೊಡೇಕಲ್ , ಬಲಶೆಟ್ಟಿಹಾಳ, ಕಾಮನಟಗಿ, ಹಳ್ಳಿ , ಶ್ರೀನಿವಾಸಪೂರ, ಮಂಜಲಾಪೂರಹಳ್ಳಿ, ವಜ್ಜಲ, ಚನ್ನೂರ, ವಡಗೇರಿ ಮುಂತಾದ ಪ್ರದೇಶಗಳಿಂದ ವಿರೂಪಾಕ್ಷಪ್ಪಗೌಡರು ಹೋರಾಡಿದರೆ, ಸಿಂದಗಿ ವಿಭಾಗದಿಂದ ಶರಣಗೌಡರು ಅನೇಕ ಛದ್ಮವೇಷಗಳಿಂದ ಅನೇಕ ಸಲ ಬಂದು ರಜಾಕಾರರನ್ನು ದಂಗುಬಡಿಸಿದ  ಮಾತು ಎಲ್ಲರ ಮನೆ ಮಾತಾಗಿದೆ. ತಮ್ಮ ಸರಹದ್ದುಗಳಲ್ಲಿದ್ದ ಗೋಗಿ, ಶಹಾಪುರ, ಕಕ್ಕಳಮೇಲಿ ಮುಂತಾದ ಗ್ರಾಮಗಳಿಗೆ ಹೋಗಿ ಹೋರಾಟ ಮಾಡಿದ್ದಾರೆ. ರಜಾಕಾರರಿಗೆ ಚಳ್ಳೆಹಣ್ಣು ತಿನ್ನಿಸಿದ್ದಾರೆಂಬ ಮಾತು ಜನಪದ ಸಾಹಿತ್ಯದಲ್ಲಿ ಹಾಡಿನಲ್ಲಿ ಇಂದಿಗೂ ಕೇಳುತ್ತೇವೆ.

ಈ ಧೀರದ್ವಯರ ಸಗರನಾಡಿನ ಮೇಲಿನ ಪ್ರೀತಿ ಭಕ್ತ ಅಪಾರವಾದದ್ದು ವಿರೂಪಾಕ್ಷಪ್ಪಗೌಡರನ್ನು ಹಿಡಿಯುವ ಸಲುವಾಗಿಯೇ ರಜಾಕಾರರು ಒಂದು ಪಠಾಣರ ತುಕುಡಿಯನ್ನು ಹುಣಸಗಿ ಕರಡುಗಿರಿಯಲ್ಲಿ ಇಡಲಾಗಿತ್ತು. ಮಾಳನೂರ, ಮಾರಲಭಾವಿ, ಹುಣಸಗಿಗಳಲ್ಲಿ ಹಲವಾರು ಪಿತೂರಿಗಳ (ದ್ರೋಹಿಗಳ) ಸಹಾಯದಿಂದ ಆಯಾಕಟ್ಟಿನ ಸ್ಥಳಗಳಲ್ಲಿ ಗೌಡರನ್ನು ಹಿಡಿಯಲು ಹವಣಿಸುತ್ತಿದ್ದರು.

ತಾಳಿಕೋಟಿಯಲ್ಲಿ, ಸುರಪುರದ ಬ್ಯಾರಿಸ್ಟರ್ ಶ್ರೀ ರಾಜಾವೆಂಕಟಪ್ಪ ನಾಯಕರು ಅಂದಿನ ಹೈದರಾಬಾದ್ ವಿಮೋಚನಾ ಸ್ವಾತಂತ್ರ್ಯ ಸಂಗ್ರಾಮ (ಹೋರಾಟ)ದ ಮುಂದಾಳುಗಳಾಗಿದ್ದರಲ್ಲದೇ ತಾಳಿಕೋಟಿಯಲ್ಲಿದ್ದ ಕಾಂಗ್ರೆಸ್ ಶಿಬಿರ ಅಧ್ಯಕ್ಷರೂ ಆಗಿದ್ದರೂ. ಅವರೆಲ್ಲರ ಸಲಹೆಯಂತೆ ಸುರಪುರದ ಬಾರಿ ಬಸಣ್ಣ (ಕಾಂಗ್ರೆಸ್) ಬಸಣ್ಣನೆಂದೇ ಕರೆಯುವ ವಾಡಿಕೆ. ಅವರು ಬಂಡೆಪ್ಪನಳ್ಳಿ ಸಾಲವಾಡಿಗಿಯಲ್ಲಿ ನಡೆಸುತ್ತಿದ್ದ ವಿರೂಪಾಕ್ಷಪ್ಪಗೌಡರ ಶಿಬಿರದಲ್ಲಿ ಸೇರಿದರು. ಅದರಂತೆ ಸುತ್ತಮುತ್ತಲಿನ ಕೆಲವು ಹಳ್ಳಿಗಳ ಜನರು ಸೇರುತ್ತಿದ್ದರು.

ಈ ಶಿಬಿರದಲ್ಲಿ ವಿರೂಪಾಕ್ಷಪ್ಪಗೌಡರ ಪರಮ ಸ್ನೇಹಿತರೂ, ಸಂಬಂಧಿಗಳೂ ಆಗಿದ್ದ ಹಗರಟಗಿಯ ಮಹಾಂತಗೌಡರೂ ಇದ್ದರು. ಸುರಪುರ ತಾಲೂಕಿನ ಮಾಳನೂರ ಗಡಿಯಲ್ಲಿ ರಜಾಕಾರರ ಹಾವಳಿ ಹೆಚ್ಚಾಯಿತು. ಸಂಘಟಿತ ಜನರ ನಾಯಕರಾದ ಮಾನ್ಯ ಬ್ಯಾರಿಸ್ಟರ್ ಶ್ರೀ ರಾಜಾವೆಂಕಟಪ್ಪ ನಾಯಕರ ಸಹಾಯಕ್ಕಾಗಿ ಸುರಪುರ ಸಂಸ್ಥಾನದ ಮಾನ್ಯ ಶ್ರೀ ರಾಜಾಪಿಡ್ಡಪ್ಪನಾಯಕರು ಅಪ್ಪರಾವ್ ಅಡ್ವೋಕೇಟ್, ಸಗರದ ಅಚ್ಚಪ್ಪಗೌಡರು, ಯಾಳಗಿಯ ಸಂಗನಗೌಡರು, ಪದಕಿ ಭೀಮರಾವ್ ಶಮಶೀರ್ (ಬಿಚ್ಚುಗತ್ತಿ) ಓಣಿಯ ಸಂಜೀವಪ್ಪ ಬೋಗಾರ, ಓಣಿಯ ಅಪ್ಪಯ್ಯ ಮಹಾದೇವಪ್ಪ ಹೂಗಾರ, ತಿಮ್ಮಯ್ಯ ದರ್ಬಾರಿ, ಬಸಲಿಂಗಪ್ಪ ಬಸಪ್ಪ ಮೆಂತೆ, ಸಂಗಪ್ಪ ಉದ್ದಾನ, ಬಸಪ್ಪ ಮಡ್ನಿ, ಬಸವರಾಜಪ್ಪ ಸಂಗಪ್ಪ, ರಾಜನಕೋಳೂರಿನ ವೆಂಕನಗೌಡ ಪಾಟೀಲ, ವಿರೂಪಾಕ್ಷಪ್ಪಗೌಡ ಪಾಟೀಲ, ಲಿಂಗನಗೌಡ ಗುಳಬಾಳ, ಗುರುಬಸಪ್ಪ ಹಗರಟಗಿ, ಬಸವಂತ್ರಯಾಗೌಡ ಪಾಟೀಲ, ವಜ್ಜಲದ ಸಂಗನಗೌಡ ಪಾಟೀಲ, ಕೆಂಭಾವಿಯ ಎಂ.ಜಿ. ಕುಲಕರ್ಣಿ, ಹುಣಸಗಿಯ ಶ್ರೀ ಮಹಾಂತಸ್ವಾಮಿಗಳು ಹಿರೇಮಠ



ಮುಂತಾದ ಧುರೀಣರು (ನಾಡಾಭಿಮಾನಿಗಳು) ಕೂಡಿಕೊಂಡು ರಜಾಕಾರ ವಿರುದ್ಧ ಆಯಕಟ್ಟು ಸ್ಥಳಗಳಾದ ಬಂಡೆಪ್ಪನಳ್ಳಿ , ನಾಗರಬೆಟ್ಟ, ಬಂಟನೂರ, ಬಿಳೇಭಾವಿ, ಬಂಡೆಪ್ಪನಳ್ಳಿ, ಸಾಲವಾಡಗಿಗಳಲ್ಲಿ ಕ್ಯಾಂಪ್‌ಗಳನ್ನು ರಚಿಸಿಕೊಂಡು ಗುಪ್ತ ಚಟುವಟಿಕೆಗಳನ್ನು ನಡೆಸುತ್ತಿದ್ದರು.

ವಿರೂಪಾಕ್ಷಪ್ಪಗೌಡರ ಮತ್ತು ಹಗರಟಗಿಯ ಮಹಾಂತಗೌಡರ ಧೈರ್ಯ ಸ್ಥೈರ್ಯ ಅವರು ನಡೆಸುವ ಗೌಪ್ಯ ಚಟುವಟಿಕೆಗಳನ್ನು ಕುರಿತು ಕಾಂಗ್ರೆಸ್ ಬಸಣ್ಣನ ಹೆಮ್ಮೆಯ ಮಾತುಗಳು ಹೀಗಿವೆ.

“ಈ ಇಬ್ಬರೂ ತೀಕ್ಷ್ಣವಾಗಿ ಆಕ್ರಮಣ ಮಾಡುತ್ತಿದ್ದರು. ಇವರ ಚಟುವಟಿಕೆಗಳು ಒಮ್ಮೊಮ್ಮೆ ಉಗ್ರಸ್ವರೂಪವಾಗಿರುತ್ತಿದ್ದವು. ಧೀರ ಯೋಧರಾದ ಇವರು ಹೈದರಾಬಾದ ಸರಹದ್ದಿನಲ್ಲಿ ಬರುವ ಗ್ರಾಮಾಂತರ ಪ್ರದೇಶಗಳಲ್ಲಿ ನುಗ್ಗಿ ರಾಜ್ಯದ ರಕ್ಷಕ ದಳದವರನ್ನು ಎದುರುಗೊಂಡು ಹಿಮ್ಮೆಟ್ಟಿಸುತ್ತಿದ್ದರು.

ಇದಕ್ಕಾಗಿಯೇ ನಾವು ಎಲ್ಲರೂ ಕೂಡಿಕೊಂಡು ಆಕ್ರಮಣ ಮಾಡುತ್ತಿದ್ದವು. ಈ ಮಾತು ಇಲ್ಲಿ ಸ್ಮರಣಾರ್ಹ ಅವರು ಕ್ರಾಂತಿಕಾರರೆನ್ನುವದಕ್ಕೆ ಬೇರೆ ನಿದರ್ಶನ ವೇಕೆಬೇಕು? ಬಾರಿ ಬಸಣ್ಣನವರ ಭಾರೀ ಮಾತುಗಳೇ ಸಾಕು.

ಕಾಂಗ್ರೆಸ್ ಶಿಬಿರಗಳಲ್ಲಿ ಯಾರು ಬೇಕಾದರೂ ಸೇರಬಹುದಿತ್ತು. ಆದರೆ ಕಠಿಣ ನಿಯಮವನ್ನು ಪಾಲಿಸಬೇಕಾಗಿತ್ತು. ಶಿಬಿರದ ಸದಸ್ಯನಾಗ ಬಯಸುವವರು ಒಂದು ಬಾಂಡ್ (ಪ್ರತಿಜ್ಞಾ ಪತ್ರ) ಬರೆದು ಕೊಡಬೇಕಾಗುತ್ತಿತ್ತು. ಅವರನ್ನು ಪರೀಕ್ಷಿಸಿ ಪರೀಕ್ಷೆಯಲ್ಲಿ ಗೆದ್ದರೆ ಮಾತ್ರ ಆ ವ್ಯಕ್ತಿಯನ್ನು ತಮ್ಮ ಶಿಬಿರಗಳಲ್ಲಿ ಸೇರಿಕೊಳ್ಳುತ್ತಿದ್ದರು. ಇದು ಮೊದಲಿನಿಂದಲೂ ನಡೆದು ಬಂದ ನಿಯಮವಾಗಿತ್ತು.

ಈ ಸಂದರ್ಭದಲ್ಲಿ ಉಗ್ರ ರಾಷ್ಟ್ರಪ್ರೇಮಿಯಾಗಿದ್ದ ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣವನ್ನೇ ಅರ್ಪಿಸಿ ಹುತಾತ್ಮನಾದ ಭಗತ್‌ಸಿಂಗನು ಮಾಡಿದ ಪ್ರತಿಜ್ಞಾ ಪತ್ರದ ಬಗ್ಗೆ ಹೇಳಿದರೆ ಅಪ್ರಸ್ತುತವಾಗಲಾರದು.

ಭಗತ್‌ಸಿಂಗನು ಒಮ್ಮೆ ತನ್ನ ಗುಂಪಿನಲ್ಲಿ ಸೇರ ಬಯಸಿ ಬಂದ ಸದಸ್ಯರನ್ನುದ್ದೇಶಿಸಿ ಹೇಳಿದ ಮಾತುಗಳನ್ನು ಕೇಳಿದರೆ ಮೈ ನವಿರೇಳುತ್ತದೆ. ಸ್ವಾತಂತ್ರ್ಯಕ್ಕಾಗಿ ನಮ್ಮಲ್ಲಿ ಕಷ್ಟ ಸಹಿಸುವ ಶಕ್ತಿ ಇದೆಯೋ ಇಲ್ಲವೋ ಎಂಬುದನ್ನು

ಎಲ್ಲರೂ ತಮ್ಮ ತಮ್ಮ ಕೈ ಇಡಲು ಹೇಳಿದನು. ಒಟ್ಟುಗೂಡಿಸಿ ಹಚ್ಚಿದ ಮೇಣಬತ್ತಿಗಳಿಂದ ಹೊರ ಬರುತ್ತಿರುವ ಆ ಜ್ವಾಲೆಯ ಮೇಲೆ ತಾನೇ ಕೈ ಇಟ್ಟನು. ಅವನ ಬಲಗೈ ಚರ್ಮವನ್ನು ಸುಟ್ಟು ಮಾಂಸ ಖಂಡಗಳೂ ಕಂಡರೂ ಭಗತ್‌ಸಿಂಗನು ಕೈ ತೆಗೆಯಲಿಲ್ಲ. ಭಗತ್‌ಸಿಂಗ್ ಗೆಳೆಯರೇ ಅವನ ಕೈ ಸರಿಸಿದರು ಸ್ವಲ್ಪಾದರೂ ಮುಖ ಕಿವಿಚಿಕೊಳ್ಳಲಿಲ್ಲ.

ಅವನ ಆತ್ಮದೃಢತೆಯನ್ನು ನೋಡಿದ ಅವನ ಗೆಳೆಯರು ಆಶ್ಚರ್ಯ ಪಟ್ಟರು. ಯುವ ಜನ ಭಾರತ ಸಭೆಗೆ ಸೇರ ಬಯಸುವ ಸದಸ್ಯರು ಪ್ರತಿಜ್ಞಾ ಪತ್ರದಲ್ಲಿ ತಮ್ಮ ರಕ್ತದಿಂದ ಸಹಿ ಮಾಡಬೇಕೆಂದು ಕರೆ ಕೊಟ್ಟರು. ಎಲ್ಲರಿಗಿಂತಲೂ ಮೊದಲು ಭಗತ್‌ಸಿಂಗನೇ ತನ್ನ ರಕ್ತದಿಂದ ಸಹಿಮಾಡಿ ತೋರಿಸಿದನು.

ಭಗತಸಿಂಗನ ಇನ್ನೊಂದು ಪ್ರಸಂಗವನ್ನು ಇಲ್ಲಿ ಪ್ರಸ್ತುತಪಡಿಸಿದರೂ ಅತಿಶಯೋಕ್ತಿಯಾಗಲಾರದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಬೇಕಾದರೂ ಆತನಲ್ಲಿ ಎಂಥ ಕಷ್ಟ ಸಂಹಿಷ್ಣುತೆ ಇತ್ತೆಂಬುದು ನಮಗೆ ಈ ಘಟನೆಯಿಂದ ತಿಳಿಯುತ್ತದೆ.

ಅದೃಷ್ಟವಶಾತ್ ಒಮ್ಮೆ ಕ್ರಾಂತಿಕಾರಿ ಗುಂಪಿನ ಸದಸ್ಯರೊಬ್ಬರಿಗೆ ಭಗತ್‌ಸಿಂಗನೊಡನೆ ಪರಿಚಯವಾಯಿತು. ಹೀಗಾದ ಪರಿಚಯ ಇವನು ಆ ಗುಂಪನ್ನು ಸೇರಲು ಅವಕಾಶವಾಯಿತು.

ಒಂದು ದಿನ ಮಧ್ಯಾಹ್ನ ಕ್ರಾಂತಿಕಾರಿಗಳ ಅಧ್ಯಕ್ಷರಿಗೆ ಭಗತ್‌ಸಿಂಗ್ ಸೇವೆ ಮಾಡುತ್ತಿದ್ದ. ಈ ನವ ತರುಣನನ್ನು ಕಂಡು ಅಧ್ಯಕ್ಷರು ನೀನು ಯಾರು? ಇಲ್ಲಿ ಏಕೆ ಬಂದಿರುವೆ? ಎಂದು ಪ್ರಶ್ನಿಸಿದರು. "ನನ್ನ ಹೆಸರು ಭಗತ್‌ಸಿಂಗ್. ಭಾರತ ಮಾತೆಯ ದಾಸ್ಯದ ಸಂಕೋಲೆಯನ್ನು ತುಂಡರಿಸಲು ಕ್ರಾಂತಿಕಾರಿಗಳ ಗುಂಪನ್ನು ಸೇರಲು ನಾನು ಬಯಸುತ್ತೇನೆ. ಅದಕ್ಕಾಗಿಯೇ ನಾನಿಲ್ಲಿ ಬಂದಿದ್ದೇನೆ" ಎಂದು ಉತ್ತರಿಸಿದನು.

ಆಗ ಅಧ್ಯಕ್ಷರು ಭಗತ ಸಿಂಗ್‌ನ ಕಡೆ ನೋಡುತ್ತ ಈ ಕ್ರಾಂತಿಕಾರಿಗಳ ಗುಂಪನ್ನು ಸೇರುವುದು ಸಾವಿನ ಜತೆ ಸೆಣಸುವದು ಒಂದೇ ಎಂಬುದು



ನಿನಗೆ ಗೊತ್ತಿದೆಯೋ? ಭಯಂಕರವಾದ ಕಷ್ಟಗಳನ್ನು ಸಹಿಸಬೇಕಾಗುತ್ತದೆ ಎಂದು ನುಡಿದರು.

ಆಗ ಭಗತ್‌ಸಿಂಗನು ನಮ್ಮ ನಿಮ್ಮಂತೆ ಹೇಡಿಗಳಂತೆ ಹೆದರಿದನೆ? ಛೇ ಇಲ್ಲ ಹೇಡಿಗೆ ಯಾವುದೂ ಸಾಧಿಸುವದಿಲ್ಲ. ಆಗ ಭಗತ್‌ಸಿಂಗನು ನಿರ್ಭಯದಿಂದ ಈ ರೀತಿ ಉತ್ತರಿಸಿದನು. " ನನಗೆ ಗೊತ್ತಿದೆ ಚೆನ್ನಾಗಿ ಗೊತ್ತಿದೆ. ನಮ್ಮ ಭಾರತ ಮಾತೆಯ ದಾಸ್ಯದ ಸಂಕೋಲೆಯನ್ನು ಮುರಿಯಲು ಅದೆಂಥ ಕಷ್ಟ ಬಂದರೂ ಸಹಿಸಿಕೊಳ್ಳುತ್ತೇನೆ."

ನೀನು ನಿಮ್ಮ ತಂದೆ ತಾಯಿಗಳಿಗೆ ಕೇಳಿ ಬಂದಿದ್ದಿಯಾ? " ನನಗೆ ಇದರ ಅವಶ್ಯಕತೆ ಇಲ್ಲವೆಂದಿನಿಸುತ್ತದೆ. ತಂದೆ–ತಾಯಿ, ಮನೆ–ಮಠ ಕುಟುಂಬಗಳಿಗಿಂತಲೂ ಭಾರತ ಮಾತೆಯನ್ನೇ ಮಹಾನ್ ಎಂದು ನಾನು ತಿಳಿದ್ದೇನೆ. ಭಾರತ ಮಾತೆಯನ್ನು ಬ್ರಿಟಿಷರಿಂದ ಬಿಡುಗಡೆ ಮಾಡಲು ಮೊದಲು ನನ್ನ ಜೀವವನ್ನೇ ಬಲಿಕೊಡುತ್ತೇನೆ" ಎಂದು ಧೀರ ಭಗತ್‌ಸಿಂಗನು ಉತ್ತರಿಸಿದನು.

ಹೌದು ನಿನ್ನನ್ನು ನಮ್ಮ ಗುಂಪಿಗೆ ಸೇರಿಸಿಕೊಳ್ಳುವ ಮುಂಚಿತವಾಗಿ ಪರೀಕ್ಷಿಸಬೇಕಾಗುತ್ತದೆ. ಎಂದು ಅಧ್ಯಕ್ಷರು ಹೇಳಿದಾಗ

ಹೌದು ಅದು ಯಾವ ವಿಷಯದಲ್ಲಿ ಪರೀಕ್ಷೆ ಮಾಡಿತ್ತೀರಿ? ಭಗತ್‌ಸಿಂಗ್ ಕೇಳಿದ.

ನಿನ್ನ ಶೌರ್ಯ ಸಾಹಸದ್ದು, ಕಷ್ಟ ಸಹಿಸುವ ಪರೀಕ್ಷೆ ಎಂದು ಅಧ್ಯಕ್ಷರು ಹೇಳಿದರು.

ಗಂಭೀರವಾಗಿ ಭಗತ್‌ಸಿಂಗನು ವೀರೋಚಿತವಾದ ಈ ರೀತಿ ಉತ್ತರ ಕೊಡುತ್ತಾನೆ.

" ನಾನು ಇದಕ್ಕೆ ಸಿದ್ಧ ನಿಮ್ಮ ಕಾಲುಗಳನ್ನು ಸ್ವಲ್ಪ ಮುಂದೆ ಚಾಚಿರಿ ಎಂದು ಭಗತ್‌ಸಿಂಗನು ಹೇಳಲು ಅಧ್ಯಕ್ಷರು, ತಮ್ಮ ಕಾಲುಗಳನ್ನು ಮುಂದೆ ಚಾಚಿದರು. ಭಗತ್‌ಸಿಂಗನು ಅಧ್ಯಕ್ಷರ ಕಾಲುಗಳ ಮೇಲೆ ತನ್ನ ಕಾಲುಗಳನ್ನಿಟ್ಟು ಭರ್ಚಿಯಿಂದ ಚುಚ್ಚಿಕೊಂಡ ಮೊನಚಾದ ಭರ್ಚಿಯ ತುದಿಯು ಭಗತಸಿಂಗನ

ಕಾಲುಗಳಲ್ಲಿ ಹಾಯ್ದು ಅಧ್ಯಕ್ಷರ ಕಾಲುಗಳಿಗೆ ತಾಗಿತು. ಅಧ್ಯಕ್ಷರು ನೋವಿನಿಂದ ನರಳಿದರು ಆಗ ಭಗತಸಿಂಗನು ಸಿಕ್ಕುಬಿದ್ದ ಭರ್ಚಿಯನ್ನು ಕಿತ್ತು ಎಸೆಯುತ್ತಾ ಹೇಳಿದ ನೀವು ನೋವಿನಿಂದ ಬಳಲಿದಿರಿ ಆದರೆ ನನಗೆ ಹೆಚ್ಚು ಗಾಯವಾದರೂ ನಾನೇನೂ ವ್ಯಥೆಪಡುತ್ತಿಲ್ಲ.

ಈ ಕಾಂಗ್ರೆಸ್ ಶಿಬಿರದ ನಿಯಮ ಪಾಲನೆಯನ್ನು ಪ್ರಪ್ರಥಮವಾಗಿ ಒಪ್ಪಿ ತನ್ನ ತೊಡೆಯ ರಕ್ತದಿಂದ ಸಹಿ ಮಾಡಿದವರು ಬಿಸಿ ರಕ್ತದ ವೀರ ಯೋಧ ವಿರೂಪಾಕ್ಷಪ್ಪಗೌಡರು.

ನಮಗೆ ೧೯೪೭ ನೇ ಆಗಸ್ಟ್ ೧೫ ಸ್ವಾತಂತ್ರ್ಯವೇನೋ ದೊರಕಿತು ನಿಜ ಆದರೆ? ಹೈದರಾಬಾದ್ ನಿಜಾಮನು ಭಾರತದ ಒಕ್ಕೂಟದಲ್ಲಿ ಸೇರಲು ನಿರಾಕರಿಸಿದನು. ' ಕಾಸಿಂ ರಜವಿಯಲ್ಲಿ ಮತಾಂಧತೆ ತುಂಬಿ ತುಳುಕುತ್ತಿತ್ತು. ಹಿಂದುಗಳ ದ್ವೇಷಿಯಾದ ಅವನು ಅಮಾಯಕ ಮುಸ್ಲಿಂ ಜನರ ಸೇನೆಯನ್ನು ಸಿದ್ಧಪಡಿಸಿ ಅದಕ್ಕೆ "ರಜಾಕಾರ" ಎಂದು ಹೆಸರಿಟ್ಟನು. ರಜಾ–ಕಾರ್ ಇದು ಉರ್ದು ಶಬ್ದ. ರಜಾಕಾರ್ ಎಂದರೆ " ತಮ್ಮ ಮನಸ್ಸಿಗೆ ಬಂದಂತೆ ಅತ್ಯಾಚಾರ ಅನೀತಿಗಳಿಂದ ನಡೆದುಕೊಳ್ಳುವ ಒಂದು ಗುಂಪು, ಅಥವಾ ಅಂಥ ಒಂದು ಸ್ವಯಂ ಸೇವಕರ ಗುಂಪು."

ರಜಾಕಾರರ ಪಡೆಯಲ್ಲಿ ರೋಹಿಲರು. ಪಠಾಣರು, ರಜಾಕಾರರು, ಮತ್ತು ಅರ ತರಬೇತಿ ಹೊಂದಿದ ಅಥವಾ ಒತ್ತಾಯಪೂರ್ವಕವಾಗಿ ಸೇರಿಸಲ್ಪಟ್ಟ ಮುಸ್ಲಿಂ ಜನರು ಇದರಿಲ್ಲಿದ್ದರು.

ಆ ರಜಾಕಾರರು, ಹಿಂದುಗಳನ್ನು ಹೀನಾ ಮಾನವಾಗಿ ಅತ್ಯಂತ ಕ್ರೂರ ರೀತಿಯಿಂದ ಪೀಡಿಸತೊಡಗಿದರು. ಕಾಸಿಂ ರಜವಿಯು ೧೯೪೬ ರಲ್ಲಿ ಇತ್ತೇಹಾದ್ ಪಕ್ಷದ ಅಧ್ಯಕ್ಷನಾದನು. ಈ ಇತ್ತೇಹಾದ್ ಉಪಾಂಗವೇ ರಜಾಕಾರರ ಪಡೆ. ರಜವಿಯು ಅದರ ಮಹಾ ದಂಡನಾಯಕನಾಗಿದ್ದನು. ರಜಾಕಾರರು, ದೇಶ ಪ್ರೇಮದೊಡನೆ ಲೂಟಿ, ದರೋಡೆ, ಕೊಳ್ಳೆ ಹೊಡೆಯುವುದು, ಸ್ತ್ರೀಯರ ಮೇಲೆ ಬಲಾತ್ಕಾರ ಮತ್ತು ಕೊಲೆ ಸುಲಿಗೆಗಳಲ್ಲಿ ಆಸಕ್ತರಾದರು.

ಚಿಕ್ಕ ಚಿಕ್ಕ ಹಳ್ಳಿಗಳಲ್ಲಿದ್ದ ಶ್ರೀಮಂತ ಬಡವರೆಂಬ ಬೇಧವಿಲ್ಲದೇ ಅವರಿಂದ ನಿರ್ದಯರಾಗಿ ಹಣ ಸುಲಿಯತೊಡಗಿದರು. ಇವರ ಕ್ರೂರತೆ, ಅನೀತಿ ಅತ್ಯಾಚಾರ



ಮಾನಭಂಗದಂತಹ ದುಶ್ಕೃತ್ಯಗಳಿಗಂಜಿ ಹಿಂದೂ ಜನರು ತಮ್ಮ ತಮ್ಮ ಗ್ರಾಮಗಳನ್ನು ತೊರೆದು ನೆಂಟರಿಷ್ಟರ ಗ್ರಾಮಗಳಿಗೆ ಪಲಾಯನ ಮಾಡಿದರು.

ರಜಾಕಾರರು ಎಸಗುವ ಇಂಥ ದುಶ್ಕೃತ್ಯಗಳನ್ನು ಕಣ್ಣಾರೆ ಕಂಡ ಮನವೊಂದು ಬಿಸಿರಕ್ತದ ತುಂಬು ಯವ್ವನದ ವಿರೂಪಾಕ್ಷಪ್ಪಗೌಡರು ಸಿಡಿದೆದ್ದರು. ತಮ್ಮೊಂದಿಗಿದ್ದ ವಿಶ್ವಾಸಿ ವೀರ ಯುವಕ ಮಿತ್ರರನ್ನು ಕೂಡಿಸಿ ತಾಳಿಕೋಟೆಯಲ್ಲಿದ್ದ ರಾಸ್ತೇರವಾಡೆಯಲ್ಲಿ ಮುಖ್ಯ ಕೇಂದ್ರವನ್ನು ಮಾಡಿಕೊಂಡು ಮೊಗಲಾಯಿ ಗಡಿಗಳಲ್ಲಿದ್ದ ಹಳ್ಳಿಗಳಾದ ನಾಗರಬೆಟ್ಟ, ಬಂಟನೂರ, ಬಂಡೆಪ್ಪನಳ್ಳಿ ಸಾಲವಾಡಗಿಗಳಲ್ಲಿದ್ದುಕೊಂಡು ಹೈದ್ರಾಬಾದ್ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿ ರಜಾಕಾರರೊಡನೆ ಹೋರಾಡತೊಡಗಿದರು.

"ಕ್ರೂರ ರಜಾಕಾರರನ್ನು ಹೊಡೆದೋಡಿಸಿ ಸುತ್ತಲಿನ ಹಳ್ಳಿಗಳಲ್ಲಿ ಶಾಂತಿಯನ್ನು ಸ್ಥಾಪಿಸಿ ಬದುಕನ್ನು ಸಮೃದ್ಧಿಗೊಳಿಸಬೇಕೆಂಬುದೇ ಈ ಚರಿತ್ರೆ ನಾಯಕ ಶ್ರೀ ವಿರೂಪಾಕ್ಷಪ್ಪಗೌಡರ ಮುಖ್ಯ ಗುರಿಯಾಗಿತ್ತು.

ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ, ಹುಟ್ಟಿದವನು ಸಾಯಲೇಬೇಕು. ಸಾಯುತ್ತಾನೆ. ಯಾವುದೇ ವ್ಯಕ್ತಿಯ ಹುಟ್ಟು ಮತ್ತು ಸಾವುಗಳು ವಿಚಿತ್ರ ಆಕಸ್ಮಿಕಗಳು ವಿರೂಪಾಕ್ಷಪ್ಪಗೌಡರು ಎಷ್ಟು ದಿನ ಬದುಕಿದರು ಎಂಬುದು ಮುಖ್ಯವಲ್ಲ. ಅವರು ಹೇಗೆ ಬದುಕಿದರು ಮುಖ್ಯ. ಯಾರು ಎಲ್ಲಾದರೂ ಹುಟ್ಟಬಹುದು, ಎಲ್ಲಾದರೂ ಸಾಯಬಹುದು, ಎಲ್ಲಿ ಹುಟ್ಟಿದ ? ಹೇಗೆ ಹುಟ್ಟಿದ ? ಎಂಬುವುದು ಮುಖ್ಯವಲ್ಲ. ಎಲ್ಲಿ ಸತ್ತ ? ಹೇಗೆ ಸತ್ತ? ಎಂಬುವದು ಮುಖ್ಯವಾಗುವುದಿಲ್ಲ. ಗೌಡರು ನಾಡಿನ ಕೆಲವೇ ಜನ ವಿರಳ ಪಂಕ್ತಿಯ ಹುತಾತ್ಮರಲ್ಲಿ ಒಬ್ಬರು. ವೀರರು, ಧೀರರು, ದೇಶಪ್ರೇಮಿಗಳು. ಧೀಮಂತ ವ್ಯಕ್ತಿಗಳು, ಗಡಿನಾಡ ಕ್ರಾಂತಿವೀರರು. ಇವರು ಸಾವಿಗೆ ಎಂದಿಗೂ ಬೆದರದ ಹೆದರದ ಏಕಾಂಗಿ ವೀರರು.

ವಿರೂಪಾಕ್ಷಪ್ಪಗೌಡರ ಶೌರ್ಯ ಸಾಹಸ ಕಡುಗಲಿತ್ವ ಧೈರ್ಯ ಸ್ಥೈರ್ಯ ದೇಶಪ್ರೇಮ, ನಾಡಪ್ರೇಮ ದಿನದಿನಕ್ಕೂ ವರ್ಧಿಸುತ್ತಾ ಹೋದವು. ಅವರ ಚಾಣಾಕ್ಷತನ ಕುರಿತು ಜನರು ಆ ಭಾಗದಲ್ಲೆಲ್ಲ ಸ್ಮರಿಸುತ್ತಿದ್ದರು. ಗೌಡರ ಹೆಸರು ಸರಹದ್ದಿನ ಎಲ್ಲ ಹಳ್ಳಿಗಳಲ್ಲೂ ಪ್ರಚಾರವಾಗಿತ್ತು. ಇತ್ತ ಸುತ್ತಲಿನ

ಕೆಲವು ಹಳ್ಳಿಗಳಲ್ಲಿದ್ದ ಮುಸ್ಲಿಂ ದ್ರೋಹಿಗಳು ಗೌಡರನ್ನು ಮುಗಿಸಿ ಬಿಡಬೇಕೆಂದು ಹೊಂಚು ಹಾಕುತ್ತಿದ್ದರು. ಹೀಗಿರುತ್ತಿರಲು ಒಂದು ದಿನ ರಜಾಕಾರರ ಕೆಲವು ಮುಖಂಡರು ಯಾರಿಗೂ ಅರಿಯದಂತೆ ಒಂದು ಸ್ಥಳದಲ್ಲಿ ಗೌಪ್ಯವಾಗಿ ಸಭೆ ಸೇರಿದರು. ಒಟ್ಟುಗೂಡಿ ಗೌಡರನ್ನು ಮುಗಿಸಿಬಿಡಬೇಕೆಂದು ನಿರ್ಧರಿಸಿದರು.

ನಿರ್ಧರಿಸಿದಂತೂ ಆಯಿತು. ಆದರೆ ರಜಾಕಾರರಿಗೆ ಈತನೇ ವಿರೂಪಾಕ್ಷಪ್ಪಗೌಡವೆಂಬುದು ಗುರ್ತಿರಲಿಲ್ಲ. ಮುಂದೆ ಹಾಯ್ದು ಹೋದರೂ ಅವರಿಗೆ ಗೌಡರ ಗುರುತು ಸಿಗುತ್ತಿರಲಿಲ್ಲ. ಇಂಥ ಸಮಯದಲ್ಲಿ ರಜಾಕಾರರಲ್ಲಿದ್ದ ಕೆಲವು ಮುತ್ಸದ್ಧಿಗಳು, ಮಾಳನೂರ, ಮಾರಲಭಾವಿ, ಹುಣಸಗಿ ಗ್ರಾಮಗಳಲ್ಲಿ ತಮ್ಮನ್ನು ನೆಚ್ಚಿಕೊಂಡು ತಮ್ಮ ಕಾರ್ಯ ಸಾಧನೆಗಳನ್ನು ಮಾಡಿಕೊಳ್ಳುತ್ತಿದ್ದ ನಾಲ್ಕಾರು ಜನ ಮುಸ್ಲಿಂ ಪಿತೂರಿ ಜನರನ್ನು ಹಣದಾಸೆ ಹಚ್ಚಿಸಿ ಬೆಳ್ಳಿ–ಬಂಗಾರ ನಗ ನಾಣ್ಯಗಳ ಆಸೆ ಆಮಿಶಗಳನ್ನು ತೋರಿಸಿ ತಮ್ಮ ಬಲೆಯಲ್ಲಿ ಹಾಕಿಕೊಂಡರು.

ಎಂಜಲ ನಾಯಿಗಳೇನು ಬೇಕು? ಬೇಡಿದಾಗ ಒಂದು ತುತ್ತು ರೊಟ್ಟಿಯನ್ನು ಹಾಕಿದರಾಯಿತು ಅದು ಅವರನ್ನು ತಿರುಗುತ್ತದೆ. ಹೀಗೆ ಮೂರ್ನಾಲ್ಕು ಜನ ಮಸ್ಲಿಂರು ವಿರೂಪಾಕ್ಷಪ್ಪಗೌಡರನ್ನು ಹಿಡಿದುಕೊಡಲು ಸಿದ್ಧರಾದರು. ಹಗಲಿರುಳೂ ಅವರ ಚಲನವಲನಗಳನ್ನು ನಿರೀಕ್ಷಿಸುತ್ತಿದ್ದರು. ಯಾರಿಗೂ ತಿಳಿಯದಂತೆ ಗುಪ್ತಚರರನ್ನು ಗೌಡರ ಹಿಂದೆ ರಜಾಕಾರರು ಬಿಟ್ಟರು.

ವಿರೂಪಾಕ್ಷಪ್ಪಗೌಡರು ಮತ್ತು ಇನ್ನಿತರ ಇಪ್ಪತ್ತು ವಿಶ್ವಾಸಿ ಮಿತ್ರರನ್ನು ಕೂಡಿಕೊಂಡು ಪಠಾಣರನ್ನು (ರಜಾಕಾರ) ಸರಹದ್ದಿನಿಂದ ಓಡಿಸುವ ಪ್ರಯತ್ನವನ್ನು ನಡೆಸಿದ್ದರು. ಆಗಾಗ ಅವಸರದ ಸಭೆ ಸೇರಿ ಚರ್ಚಿಸುತ್ತಿದ್ದರು.

ನಿಜಾಮೀ ರಜಾಕಾರ ಸೈನ್ಯವನ್ನು ಎಲ್ಲ ರೀತಿಯಿಂದಲೂ ಎದುರಿಸಿ ಸೋಲಿಸಿ ಓಡಿಸಬೇಕಿತ್ತು. ಆದರೆ ಅವರನ್ನು ಓಡಿಸುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ ರಜಾಕಾರರಲ್ಲಿ ಮದ್ದು, ಗುಂಡು , ಭರ್ಚಿ, ಖಡ್ಗ, ಘನ್ ಮತ್ತು ಪಸ್ತೂಲ್ ಮುಂತಾದ ನವೀನತರದ ಯುದ್ಧೋಪಕರಣಗಳಿದ್ದವು. ಅಂಥ ಒಂದು ಭಯಂಕರ ಭಯಾನಕ ಸ್ವರೂಪ



ತಾಳಿದ್ದ ಸೈನ್ಯವನ್ನು ಹೊಡೆದೋಡಿಸಲು ಅಥವಾ ಸೋಲಿಸಲು ಅಹೋರಾತ್ರಿ ಓಡಾಡಿ ಯೋಚನೆ ಯೋಜನೆಗಳನ್ನು ಮಾಡಿಕೊಳ್ಳಬೇಕಾಗುತ್ತಿತ್ತು.

ಆಗ ರಜಾಕಾರ ( ಪಠಾಣ)ರಿಂದ ತೊಂದರೆಗೀಡಾದ ಹಳ್ಳಿಗಳೆಂದರೆ ಮಾರಲಭಾವಿ, ಮಾಳನೂರ, ಗುಳಬಾಳ, ಹುಣಸಗಿ, ದೇವಾಪೂರ, ಜಹಗೀರ್, ಬನಹಟ್ಟಿ, ಕೋಳಿಹಾಳ, ಇಸಾಂಪೂರ, ಹಗರಟಗಿ, ರಾಜನಕೋಳೂರು ಮತ್ತು ಬಂಡೆಪ್ಪನಳ್ಳಿ ಸಾಲವಾಡಗಿ ಇವೇ ಮುಂತಾದವುಗಳು.

ಪಠಾಣರ ಕ್ರೂರ ಕೃತ್ಯಗಳಿಗೆ ದೌರ್ಜನ್ಯಗಳಿಗೆ ಜನರು ಬೇಸತ್ತಿದ್ದರು. ದಿನ ನಿತ್ಯ ಇವರ ಹಿಂಸಾಚಾರಗಳನ್ನು ಕಂಡು ಕೇಳಿ ಬೇಸತ್ತ ಸ್ವಾತಂತ್ರ್ಯ ಪ್ರೇಮಿ ವಿರೂಪಾಕ್ಷಪ್ಪಗೌಡರ ಬಿಸಿರಕ್ತ ಕುದಿಯುತ್ತಿತ್ತು. ಕೆರಳಿದ ಕೇಸರಿಯಂತೆ, ಹಸಿದ ಹುಲಿಯಂತೆ ರಜಾಕಾರರ ಮೇಲೆ ಒಮ್ಮೊಮ್ಮೆ ಒಬ್ಬನೇ ದಾಳಿ ಮಾಡಿ ಅವರನ್ನು ಹೆದರಿಸಿ ಓಡಿಸಿ ಬಂದದ್ದೂ ಉಂಟು. ರಜಾಕಾರರ ವಿರೂಪಾಕ್ಷಪ್ಪಗೌಡರ ಹೆಸರು ಕೇಳಿದರೆ ಸಾಕು ಅವರು ಅಂಜಿ ಹಿಂಜರಿಯುತ್ತಿದ್ದರು. ಅವರ ಚಲವಲನಗಳ ಸುಳಿವೇ ರಜಾಕಾರರಿಗೆ ಹತ್ತುತ್ತಿರಲಿಲ್ಲ. ಒಮ್ಮೆ ಸಾಲವಾಡಗಿಯಲ್ಲಿದ್ದರೆ ಮರುದಿನ ಬಂಟನೂರಿನಲ್ಲಿ, ಮಗದೊಮ್ಮೆ ಕೋಳೂರಿನಲ್ಲಿ ಒಂದೆಡೆಗೆ ಇರುತ್ತಿರಲಿಲ್ಲ. ಹೀಗಾಗಿ ರಜಾಕಾರರಿಗೆ ಗೌಡರೆಂದರೆ , ಒಡೆಯದ ಒಗಟಾಗಿದ್ದರೆ. ಇವರ ಧೈರ್ಯ ಸಾಹಸವನ್ನು ನೆನಪಿಸಿದರೆ ಸಾಕು ನಮಗೆ ಸಿಂಧೂರಿ ಲಕ್ಷ್ಮಣ, ಸಂಗೊಳ್ಳಿ ರಾಯಣ್ಣ, ಹಮ್ಮಿಗಿ ಕೆಂಚನಗೌಡ, ಮುಂಡರಗಿ ಭೀಮರಾಯರಂತಹ ವೀರ ಯೋಧರು ಕಣ್ಮುಂದೆ ಹಾದು ಹೋಗುತ್ತಾರೆ .

ಗೌಡರ ವಾಸಸ್ಥಾನ ರಜಾಕಾರರಿಗೆ ತಿಳಿದಿದ್ದರೂ ಅವರನ್ನು ರಜಾಕಾರರಿಗೆ ಬಂಧಿಸುವುದಾಗಲಿಲ್ಲ. ವಿರೂಪಾಕ್ಷಪ್ಪಗೌಡ ಅವರ ಸಂಗಡಿಗರೊಂದಿಗೆ ಗುಂಡಿನ ಚಕಮುಕಿ ನಡೆಯುವುದರಲ್ಲಿ ಯಾವುದೇ ಸಂಶಯ ಇರಲಿಲ್ಲ. ಸಾಧ್ಯವಾದಷ್ಟು ಅವರನ್ನು ಆಯಕಟ್ಟಿನ ಸ್ಥಳದಲ್ಲಿಯೇ ಭೇಟಿಮಾಡಬೇಕೆಂದು ರಜಾಕಾರರು ನಿರ್ಣಯ ಮಾಡಿದ್ದರು. ಇದಕ್ಕೆ ಪಕ್ಕದ ಎರಡು ಹಳ್ಳಿಗಳಲ್ಲಿದ್ದ ಇಬ್ಬರು ಮುಸ್ಲಿಂ ದ್ರೋಹಿಗಳು ಸಹಾಯ ಮಾಡುವುದಾಗಿಯೂ ರಜಾಕಾರರಲ್ಲಿದ್ದ ಪಠಾಣರಿಗೆ ವಚನ ಕೊಟ್ಟಿದ್ದರು. ಮಾತು ಕೊಡುವುದು ಸುಲಭ ಆದರೆ ಗೌಡರನ್ನು

ಜೀವಂತ ಹಿಡಿದುಕೊಡುವದು ಅಷ್ಟು ಸುಲಭವಾಗಿರಲಿಲ್ಲ. ಬಾಲ್ಯದಲ್ಲಿ ಮಾಡಿದ ಅನೇಕ ಕಸರತ್ತು ವ್ಯಾಯಾಮಗಳಿಂದ ಅವರ ಕಾಯ ವಜ್ರಕಾಯದಂತಾಗಿತ್ತು. ತಮ್ಮೂರಿನ ಪಕ್ಕದಲ್ಲಿ ನಾಲ್ಕು ಕಿ.ಮೀ ದೂರದಲ್ಲಿದ್ದ 'ರಾಯನಪಾಳ' ಎಂಬ ಹಾಳುಕೋಟೆ ಯನ್ನೇರಿ ಸುತ್ತಲೂ ಫೈರಿಂಗ್ ಮಾಡುವುದನ್ನು ಬೇಟೆಯಾಡು ವುದನ್ನು ರೂಢಿಸಿಕೊಂಡಿದ್ದರು. ಬಿಜವಾಡಕ್ಕೆ ಹೋಗಿ ಬಾಂಬ್ ಎಸೆಯುವ, ಫೈರಿಂಗ್ ಮಾಡುವ ಯುದ್ಧ ನಿಪುಣತೆಯನ್ನು ಗೌಡರು ರೂಢಿಸಿ ಕೊಂಡಿದ್ದರು.

(ವಿರುಪಾಕ್ಷಪ್ಪಗೌಡರ ತಾಯಿ ಗೌರಮ್ಮಗೌಡಶಾನಿಯವರು ಹೇಳಿಕೆಯ ಪ್ರಕಾರ)

೧೯೪೮ ನೇ ಇಸ್ವೀ ಮೇ ತಿಂಗಳ ಕೊನೆಯ ವಾರದ ಒಂದು ದಿನ ಶನಿವಾರ ಹೈದ್ರಾಬಾದ್ ವಿಮೋಚನಾ ಹೋರಾಟದ ಇತಿಹಾಸ ಪುಟದಲ್ಲಿ ಅಚ್ಚಳಿಯದೇ ಉಳಿದ ಸ್ವಾತಂತ್ರ್ಯ ಹೋರಾಟಗಾರ ವೀರಯೋಧ ಕ್ರಾಂತಿಕಾರ ವಿರುಪಾಕ್ಷಪ್ಪಗೌಡರನ್ನು ಮರೆಯದ ದಿನ.

ಮುಂಜಾನೆ ಸುಮಾರು ೧೧ ಗಂಟೆಯಾಗಿರಬಹುದು, ಅದಾವದೋ ಕಾರ್ಯದ ನಿಮಿತ್ತ ತಮ್ಮ ಗೆಳೆಯರೊಂದಿಗೆ ಹುಬ್ಬಳ್ಳಿಗೆ ಹೋಗಿದ್ದ ವಿರುಪಾಕ್ಷಪ್ಪಗೌಡರು ಸಾಲವಾಡಗಿಗೆ ಬಂದರು. ಬರುವಾಗ ಮಸಿನ್ ಗನ್ನೊಂದನ್ನು ತಂದಿದ್ದರು. ಅದೇನು ಅವರಿಗೆ ಹೊಸದೇನಲ್ಲ. ಅವರ ಮಾವನ ಮನೆ( ಸಾಲವಾಡಗಿ)ಯಲ್ಲಿ ಅಲ್ಲಲ್ಲಿ ಮನೆಯ ಮೂಲೆಗೊಂದಿಗಳಲ್ಲಿ ಮಾಡುಗಳ ಜವಾರಿಗಳ ಮೇಲೆ ನಾಡ ಬಾಂಬ್‌ಗಳು, ರಿವಾಲ್ವರ್‌ಗಳು, ಭರ್ಚಿಗಳು, ಚಾಕು ಚೂರಿಗಳು ಬಿದ್ದಿರುತ್ತಿದ್ದವು. ಕ್ರಾಂತಿಕಾರಿಗಳ ಮನೆಯಲ್ಲಿ ಸಿಗುವುದಾದರೂ ಮತ್ತೇನು? ಆದರೂ ಅಂದು ತಂದಿದ್ದ ಇಟಾಲಿಯನ್ ಆ ಮಸಿನ್‌ಗನ್‌ನ್ನು ಮನೆಯ ಹಾಗೂ ಪಕ್ಕದಲ್ಲಿ ಕೆಳಗೆ ಸುತ್ತಲೂ ಕಣ್ಣಾಡಿಸಿ ತಮ್ಮ ಆನಂದಾಶ್ಚರ್ಯಗಳನ್ನು ವ್ಯಕ್ತಪಡಿಸುತ್ತಿದ್ದರು.

ಬಹುದೂರದಿಂದ ಬಂದ ಗೌಡರು ಮಾರ್ಗಾಯಾಸದಿಂದ ಸ್ವಲ್ಪ ಬಳಲಿದಂತಾಗಿದ್ದರೂ ಮರುದಿನ ಶನಿವಾರ ಮುಂಜಾನೆ ಗೌಡರು ಬಚ್ಚಲ ಮನೆಯೊಳಗೆ ಬಿಸಿನೀರಿನ ಸ್ನಾನ ಮಾಡಿ ಊಟ ಮಾಡಿಕೊಂಡು ಸ್ವಲ್ಪ ವಿರಮಿಸಬೇಕೆಂದು ಅಟ್ಟದ ಮೆಟ್ಟಿಲುಗಳನ್ನೇರಿದರು. ಮಡದಿ ಗಂಗಮ್ಮನವರು



ಹಾಸಿದ ಮೆತ್ತನೆಯ ಹಾಸಿಗೆಯ ಮೇಲೆ ಒರಗಿದರು. ಅದೇಕೋ ಗೌಡರಿಗೆ ತಲೆ ನೋವು ಕಾಣಿಸಿಕೊಂಡಂತಾಯಿತು. ಗೌಡರು ಗಂಗಮ್ಮನವರನ್ನು ಕರೆದರು. ಗಂಗಮ್ಮನವರು ಗೌಡರ ತಲೆ ಒತ್ತುತ್ತ ಕುಳಿತರು. ಕುಳಿತು ಸುಮಾರು ಹತ್ತು ಹದಿನೈದು ನಿಮಿಷಗಳಾಗಿರಲಿಕ್ಕಿಲ್ಲ ಒಮ್ಮೆಲೆ ಓರ್ವವ್ಯಕ್ತಿ ಏದುಸಿರು ಬಿಡುತ್ತ ಗಡ ಬಡಿಸುತ್ತ ಗರಬಡಿದವನಂತೆ ಹೆಬ್ಬಾಗಿಲಿಲ್ಲಿ ಬಂದು ನಿಂತನು.

ಯಪ್ಪಾ ಗೌಡ್ರು ಇಲ್ಲೇನ್ರಿ ? ಪುನ: ಅದೇ ಮಾತು ಅಟ್ಟದ ಮೇಲೆ ವಿಶ್ರಮಿಸುತ್ತಿದ್ದ ಗೌಡರ ಲಕ್ಷ್ಯ ಕೂಗಿದ ವ್ಯಕ್ತಿಯತ್ತ ಹೋಯಿತು.

ಯಾರು? ಗೌಡರು ಗಂಗಮ್ಮನವರಿಗೆ ಆದೇಶವಿತ್ತವರಂತೆ ನುಡಿದರು ಗಂಗಮ್ಮನವರು ಮೇಲಿನಿಂದ ಬಾಗಿಲಿನತ್ತ ನೋಡಿ ಯಾರೋ ಒಬ್ಬ ಮನುಷ್ಯ ಬಂದಿದ್ದಾನೆ ನೀವೇ ವಿಚಾರಿಸಿರಿ ಎನ್ನಲು, ಗೌಡರು ಒಮ್ಮೆಲೇ ಮೇಲೆದ್ದರು. ಬಂದವನನ್ನು ನೋಡಿ ಓ ನೀನಾ! ಏನು ಸುದ್ದಿ? ಏಕೆ ಬಂದೇ? ಮತ್ತೇನು? ಒಮ್ಮೆಲೇ ಎರಡು ಮೂರು ಪ್ರಶ್ನೆಗಳನ್ನು ಬಂದ ಆ ವ್ಯಕ್ತಿಗೆ ಕೇಳಿದರು. ಬಂದ ಆ ಮನುಷ್ಯ ಏದುರುಸಿ ಬಿಡುತ್ತಿದ್ದ ಮಾತಾನಾಡಬೇಕೆಂದರೆ ಅವನಿಗೆ ಮಾತು ಹೊರಡದಾಗಿದೆ ಮೈ ಬೆವರಿದೆ. ಏನು ಏಕೆ ಸುಮ್ಮನಾದೆ? ಎಂದು ಗೌಡರು ಮೇಲು ಧ್ವನಿಯಲ್ಲಿ ಕೇಳಲು ಏನ್ರಿ ಏಪ್ಪಾ ಏನ ಹೇಳಲ್ರಿ, ಏನು ಹೇಳೋ ಅಂಥದ್ದೇನಾಯ್ತು, ನನ್ನ ಮುಂದೆ ಹೇಳಿದರೆ ತಿಳಿಬೇಕಲ್ಲ? ಬಂದ ವ್ಯಕ್ತಿ ಮತ್ತಾರೂ ಆಗಿರದೆ ಪಕ್ಕದ ಹಳ್ಳಿ ಬಂಡೆಪ್ಪನಳ್ಳಿಯವ ಗೌಡರಿಗೆ ಬೇಕಾದ ಓರ್ವ ವಿಶ್ವಾಸಿ ಮನುಷ್ಯನಾಗಿದ್ದ ಸಾವರಿಸಿಕೊಂಡು ತಡವರಿಸುತ್ತ, ನಮ್ಮ ಸಾಲವಾಡಗಿ, ಸೀಮೆಯಲ್ಲಿದ್ದ ಮುಕಾರ್ತಿ ಗುಡ್ಡದ ಸಮೀಪದಲ್ಲಿದ್ದ ಹೊಲದಲ್ಲಿ ಬಣವಿಗೆ ಬೆಂಕಿ ಹಚ್ಯಾರ್ರಿ

ಏನು ಬಣವಿಗೆ ಬೆಂಕಿ ಹಚ್ಚಿದ್ದಾರೆಯೇ?

ಹೌದು ಗೌಡ್ರೆ ಬಣವಿಗೆ ಬೆಂಕಿ ಹಚ್ಚಿದ್ದಾರೆ

ಎಲ್ಲಾ ಮಿಂಚಿ ಹೋಯಿತಲ್ಲಾ, ಹಚ್ಚಿ ಎಷ್ಟು ಹೊತ್ತಾಯಿತು ? ಅಷ್ಟೇ ಅರ್ಧತಾಸ ಆಗಿರಬೇಕ್ರಿ. ಬಂದ ಆ ಮನುಷ್ಯನ ಮಾತು ಕೇಳಿದ ಕೂಡಲೇ ಗೌಡರ ಹೊಟ್ಟೆಯಲ್ಲಿಯೇ ಉರಿಯೆದ್ದಂತಾಯಿತು. ಮನಸ್ಸು ಕಸಿವಿಸಿಯಾಯಿತು, ಕಣ್ಣು ಕೆಂಪೇರಿದವು.

ತಿಳಿಯಿತು ಇದು ಆ ದುಷ್ಟ ರಜಾಕಾರರ ಕೃತ್ಯವೇ ಇರಬೇಕು. ಅವರಲ್ಲದೇ ಇಂಥ ಹೇಯ ಕೃತ್ಯಕ್ಕೆ ಮತ್ತಾರು ಮುಂದಾಗುವರು? ಅವರ ಧ್ವನಿಯಲ್ಲಿ ಗಡಸುತನ ಎದ್ದು ಕಾಣಿಸಿತು. ಅವರ ಸ್ಥಿತಿಯನ್ನು ಕಂಡ ಮನೆಯವರು ಹೆದರಿ ತೆಪ್ಪಗೆ ಕುಳಿತರು. ಏನಾಯಿತೆಂದು ಕೇಳುವ ಧೈರ್ಯ ಯಾರಿಗೂ ಬಾರದಾಯಿತು. ಮನೆಗೆ ಮನೆಯೇ ಮೌನ.

ಗಡಿಬಿಡಿಯಿಂದ ಗೌಡರು ಸರಸರನೇ ಮನೆಯ ಮಾಳಿಗೆಯನ್ನೇರಿದರು. ಬಣಿಮೆಗೆ ಹಚ್ಚಿದ ಬೆಂಕಿ ಮುಗಿಲೆತ್ತರ ನಾಲಗೆಯನ್ನು ಚಾಚಿದೆ. ಭಯಂಕರ ಸ್ವರೂಪದಲ್ಲಿ ಉರಿಯುತ್ತಿದೆ. ಗುಡ್ಡದಲ್ಲಿನ ಪಶು ಪಕ್ಷಿಗಳು ಹಾಹಾಕಾರ ಧ್ವನಿ ಮಾಡುತ್ತಿವೆ. ಮಧ್ಯಾಹ್ನ ಸುಮಾರು ಎರಡು ಗಂಟೆಯಾಗಿರಬೇಕು ಮೇ ತಿಂಗಳು ಬೇಸಿಗೆ ತನ್ನ ಪ್ರಖರತೆಯನ್ನು ಬೀರುತ್ತದೆ ಮಧ್ಯಾಹ್ನದ ಉರಿಬಿಸಿಲು ಎಲ್ಲವೂ ನಿಃಶಬ್ದ ಅಲ್ಲಿನ ಮೂಕಾರ್ತಿ ಗುಡ್ಡ ಇದನ್ನು ಕಣ್ಣಾರೆ ನೋಡುತ್ತಿದೆ. ಪಠಾಣರ ಈ ರಾಕ್ಷಸೀ ಕೃತ್ಯವನ್ನು ಕಂಡು ಮರ ಮರ ಮರುಗುತ್ತಿದೆ ಬಣವಿಗೆ ಬೆಂಕಿ ಹಚ್ಚಿದ ಈ ನೀಚರನ್ನು ನಾಶಮಾಡಲೇಬೇಕು ಆದರೆ?

ಆದರೆ ಪಠಾಣರನ್ನು ನಾಶಮಾಡುವ ವ್ಯಕ್ತಿ ಇಲ್ಲವೇ ? ಇದ್ದಾನೆ ಏಕಿಲ್ಲ? ದುಷ್ಟರನ್ನು ಸಂಹಾರ ಮಾಡಲೆಂದೇ ದೇವರು ಧೀರ ವೀರ ವ್ಯಕ್ತಿಯನ್ನು ಹುಟ್ಟಿಸಿದ್ದಾನೆ. ಅವನೇ ಈ ವಿರೂಪಾಕ್ಷಪ್ಪಗೌಡ ಶಿಕ್ಷೆ ಆಗಲೇಬೇಕು ಆಗುತ್ತದೆ. ಮೂಕಾರ್ತಿ ಬೆಟ್ಟ ಮಾತಾನಾಡಿದಂತಾಯಿತು. ಗೌಡರು ಮತ್ತೊಮ್ಮೆ ಉರಿಯುವ ಬಣವಿಯತ್ತ ಕಣ್ಣ ಹರಿಸಿದರು. ಇಬ್ಬರು ಕಾಖಿ ಪ್ಯಾಂಟಿನವರು ಕಂಡರು. ಓಹೋ! ಅರ್ಥವಾಯಿತು ಆದರೆ ಮಾಡುವುದೇನು? ಎಲ್ಲವೂ ವ್ಯರ್ಥವಾಯಿತು.

ಎನ್ನುತ್ತ ಮೇಲ್ಮಾಳಿಗೆಯಿಂದ ಸರಸರನೇ ಇಳಿದರೆ ನೇರವಾಗಿ ಕೊಠಡಿಯ ಒಳಗಡೆ ಹೋದರು ಇಟಾಲಿಯನ್ ಮಸಿನ್ ತೆಗೆದುಕೊಂಡವರೇ ತಲಬಾಗಿಲಿಗೆ ಬಂದರು. ಅವಸರದಲ್ಲಿ ಹೊಸ್ತಿಲನ್ನು ದಾಟುವಾಗ ವಿರೂಪಾಕ್ಷಪ್ಪಗೌಡರ ತಲೆಗೆ ಬಾಗಿಲಿನ ಹಣಿಪಟ್ಟಿ ಬಡಿಯತು. ಇದನ್ನೆಲ್ಲಾ ಮೂಕ ಪ್ರೇಕ್ಷಕರಂತೆ ನೋಡುತ್ತ ನಿಂತಿದ್ದ ಗೌಡರ ತಂದೆ–ತಾಯಂದಿರು ರಾಜನಕೋಳೂರದಿಂದ ಸಾಲವಾಡಗಿ ಯಲ್ಲಿದ್ದ ನೆಂಟರ (ಸೊಸೆ ಗಂಗಮ್ಮನವರ) ಮನೆಯಲ್ಲಿಯೇ ವಾಸವಾಗಿದ್ದರು!



ಮನಸ್ಸು ತಡೆಯದೇ "ಬೇಡ ವಿರೂಪಣ್ಣಾ ಬೇಡ ಹೋಗುವುದು ಬೇಡ, ಇದು ಅಪಶಕುನದ ಸಂಕೇತ ಎಂದು ಗೋಗರೆದು ಕೇಳಿದರೂ ಮಗ ಕಿವಿಗೊಡಲಿಲ್ಲ. ಮೂಢನಂಬಿಕೆ, ಕಂದಾಚಾರಗಳನ್ನು ಕಡೆಗಣಿಸಿದರು. ಹಿರಿಯರ ಮಾತುಗಳನ್ನು ಅಲಕ್ಷಿಸಿದರು. ಅವರ ದೃಷ್ಟಿ ಅನ್ಯಾಯವಾಗಿ ಬಣಮೆಗೆ ಬೆಂಕಿ ಹಚ್ಚಿದ ಆ ಪಠಾಣರ ಕಡೆಗೆ ಹರಿದಿತ್ತು.

ಹನ್ನೊಂದು ತಿಂಗಳು ವ್ರತೋಪವಾಸ ಮಾಡಿ ದೇವರಿಗೆ ಹರಕೆ ಹೊತ್ತು ಪಡೆದ ಧೀರ ಮಗುವನ್ನು ಅಧ್ಥೇಗೆ ಹೋಗಲು ಬಿಟ್ಟೀತು. ಅತ್ತೆ, ಮಾವ, ಮಡದಿ, ತಾಯಿ, ತಂದೆ ಬಂಧು– ಬಳಗ ಹೋಗಬೇಡೆಂದು ಪರಿಪರಿಯಿಂದ ಬೇಡಿಕೊಂಡರು. "ಮಗನ ನಿರ್ಧಾರವನ್ನು ಸಡಿಲಗೊಳಿಸಬೇಕೆಂದು ತಾಯಿ ಗೌರಮ್ಮನವರು "ನಮ್ಮ ಕುಟುಂಬದ ಆಸೆಯಲ್ಲಾ ನಿನ್ನ ಮೇಲೆ ಅಯ್ತಪ್ಪಾ ವಿರುಪಣ್ಣ, ತಂದೆ ಬಸವಂತರಾಯಗೌಡರು ಮಧ್ಯ ಬಾಯಿಹಾಕಿ ಅಪ್ಪಾ ನೋಡಪಾ ಜರಾ ನನ್ನ ಕಡೆ ಹೊರಳಿ ನೋಡಪಾ ನಮ್ಮ ಸಂಸಾರಕ್ಕೆ ನೀನೇ ಏಕೈಕ ಆಧಾರ. ಏಕೈಕ ಪುತ್ರ ನಮ್ಮ ಮನೆಯ ಕೀರ್ತಿ ಬೆಳಗಬೇಕಾದರೆ ಅದು ನಿನ್ನಿಂದಪ್ಪ ನಮ್ಮ ಮನೆಯ ದೀಪ ನೀನೆ ಎಂದು ಕಾಡಿಬೇಡಿದರೂ ಗೌಡರು ತಮ್ಮ ನಿರ್ಧಾರವನ್ನು ಸಡಿಲಿಸಲು ಸಿದ್ಧರಾಗಲಿಲ್ಲ.

ಇಂಥ ಮಾತುಗಳನ್ನು ನೀವು ನನಗೆ ಹೇಳಬಾರದು. "ಸ್ವದೇಶ ಬಾಂಧವರ ಮೇಲೆ ನಡೆಯುತ್ತಿದ್ದ ಹಿಂಸಾಚಾರ ಅತ್ಯಾಚಾರ, ಅನಾಚಾರ, ಅಪಚಾರ, ಭ್ರಷ್ಟಚಾರ, ಈ ಪಂಚಾಚಾರಗಳನ್ನು ಕೇಳಿ ಕೋಪದಿಂದ ರಕ್ತ ಕುದಿದು ನಾಡಿಗಾಗಿ ಪ್ರಾಣವನ್ನೇ ಮುಡುಪಾಗಿಟ್ಟಿರುವ ಈ ನಿನ್ನ ಧೀರ ಮಗನನ್ನು ಧನ್ಯನೆಂದು ನೀವೇಕೆ ಮಾನ್ಯ ಮಾಡಬಾರದು?"

ಲೆಕ್ಕವಿಲ್ಲದಷ್ಟು ಜನ ಹುಟ್ಟುತ್ತಾರೆ. ಲೆಕ್ಕವಿಲ್ಲದೆ ಸಾಯುತ್ತಾರೆ. ಆದರೆ ಯಾರು ನಾಡಿಗಾಗಿ ಅಥವಾ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡುತ್ತಾರೋ ಅಂಥವರನ್ನು ವಿದ್ವಾಂಸರು, ಮಹಾಪುರುಷರ ಸಾಲಿಗೆ ಸೇರಿಸುತ್ತಾರೆ.

"ಸೇಡು ತೀರಿಸಿಕೊಳ್ಳಲೇಬೇಕು ನಮ್ಮ ಗಡಿ ಬಿಟ್ಟು ಓಡಿಸಬೇಕು ಹೈದ್ರಾಬಾದ್ ವಿಮೋಚನೆ ಮಾಡಲೇಬೇಕು ನಮ್ಮ ಜನ ಸುಖದಿಂದ ನಿರ್ಭಯದಿಂದ ಇರಬೇಕೆಂಬುದೆ ಅವರ ಧ್ಯೇಯವಾಗಿತ್ತು.

ಗೌಡರಾಡಿದ ದಿಟ್ಟತನದ ಗಟ್ಟಿತನದ ಈ ಮಾತುಗಳನ್ನು ಕೇಳಿ ಹಾಂಗ ನಿನ್ನ ಹಟಾನ ಹಿಡಿದರ ಹ್ಯಾಂಗಾಪಾ ವಿರುಪಣ್ಣ ನಾನೇನು ಮಾಡಬೇಕು? ಆ ದುಷ್ಟ ರಜಾಕಾರರ ಹೊಡೆದಾಟದಲ್ಲಿ ಆಕಸ್ಮಾತ ನಿನಗೇನಾದರೂ ಆದರೆ ನಮಗ್ಯಾರು ದಿಕ್ಕು? ನೀನು ವಿಚಾರ ಮಾಡಪಾ ಅವಸರ ಮಾಡಬ್ಯಾಡ ಎಂದು ತಂದೆ–ತಾಯಿಗಳು ಅತಿ ನಮ್ರತೆಯಿಂದ ಕಣ್ಣೀರು ಸುರಿಸುತ್ತ ಹೇಳಿದರು.

ಮನುಷ್ಯನಿಗೆ ಬಾಲ್ಯ, ಯೌವನ ಮುಪ್ಪುಗಳು ಬಂದು ಹೋಗುವಂತೆಯೇ ಮರಣವೂ ಬಂದು ಹೋಗುತ್ತದೆ. ಧೀರರಾದವರು ಅದರಿಂದ ವಿಚಲಿತರಾಗುವದಿಲ್ಲ. ನೀವು ಪದೇ ಪದೇ ಅದೇ ಮಾತುಗಳನ್ನೇಕೆ ಆಡುತ್ತೀರಿ? ನಿನ್ನ ಹಠ ಮಾರಿತನವನ್ನು ಬಿಟ್ಟುಬಿಡು ವಿರುಪಣ್ಣಾ ಎಂದು ತಂದೆ–ತಾಯಿಗಳು ಗೋಗರೆದರು ಎಂದಿಗೂ ಸಾಧ್ಯವಿಲ್ಲ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರೆ ಅದು ವೀರನ ಲಕ್ಷಣವೂ ಅಲ್ಲ. ಮೇಣಬತ್ತಿ ತನ್ನನ್ನೇ ತಾನು ಸುಟ್ಟುಕೊಂಡು ಪರರಿಗೆ ಬೆಳಕನ್ನು ಕೊಡುವಂತೆ ನೆಲದ ಸ್ವಾತಂತ್ರ್ಯಕ್ಕಾಗಿ ಪಠಾಣರೊಡನೆ ಹೋರಾಡುವಾಗ ನನ್ನ ಪ್ರಾಣ ಹೋದರೂ ಚಿಂತೆಯಲ್ಲ. ಛಲದಂಕಮಲ್ಲನಂತೆ ಏಕಾಂಗಿ ವೀರನಾಗಿ ಪಠಾಣರೊಡನೆ ಹೋರಾಡಿ ಹೈದ್ರಾಬಾದ್ ಸಂಸ್ಥಾನವನ್ನು ವಿಮೋಚನೆಗೊಳಿಸುತ್ತೇನೆ ಇದು ನನ್ನ ಪ್ರತಿಜ್ಞೆ, ಹೈದರಬಾದ್ ಸಂಸ್ಥಾನವು ಭಾರತ ಸರಕಾರದೊಡನೆ ವಿಲೀನವಾಗುವವರೆಗೂ ನನಗೆ ಸಮಾಧಾನವಿಲ್ಲ ಎಂದು ಗೌಡರು ತಮ್ಮ ಅಚಲವಾದ ನಿರ್ಧಾರವನ್ನು ಕಠೋರವಾಗಿ ಹೇಳಿಬಿಟ್ಟರು. ಗೌಡರ ನಿರ್ಧಾರದ ಮಾತುಗಳನ್ನು ಕೇಳಿ ಎಲ್ಲರೂ ಮೌನವಾದರೂ.

ಆಹಾ ! ಎಂಥ ಧೀಮಂತ ವ್ಯಕ್ತಿ ಈತ !

ಸ್ವಾತಂತ್ರ್ಯ ಹೋರಾಟಗಾರ ರಾಷ್ಟ್ರಪ್ರೇಮಿ ಇದಾವುದಕ್ಕೂ ಲಕ್ಷಿಸಲಾರ. ಮಡದಿ, ಮಕ್ಕಳು, ಅಣ್ಣ ತಮ್ಮ ಅಕ್ಕ ತಂಗಿ ಬಂಧು ಬಾಂಧವರು, ಎಂಬ ವ್ಯಾಮೋಹವಿದ್ದವನು ಎಂದೂ ರಾಷ್ಟ್ರಭಕ್ತನಾಗಲಾರ.

‘‘ಭಾರತವೇ ನನ್ನ ಮನೆ ಜನತೆಯೇ ನನ್ನ ಸಹೋದರರು ಭಾರತಾಂಬೆಯೇ ನನ್ನ ಮಾತೆ ಆ ತಾಯಿಗೆ ಯಾರಾದರೂ ಕೈ ಮಾಡಿದರೆ ಹನಿ ರಕ್ತ ಇರುವವರೆಗೆ ಹೋರಾಡಿ ಅವಳ ಮಾನವನ್ನು ಉಳಿಸಬೇಕು. ಇದು ಸ್ವಾಂತಂತ್ರ್ಯ ವೀರನಿಗಿರಬೇಕಾದ ಮಹಾನ್ ಗುಣ.



ಇಂಥ ನಾಡಾಭಿಮಾನಿ, ದೇಶಾಭಿಮಾನಿಯಾದ ವೀರ ವಿರೂಪಾಕ್ಷಪ್ಪಗೌಡರನ್ನು ಪಡೆದ ತಂದೆ–ತಾಯಿಗಳೇ ಧನ್ಯರು ಪುಣ್ಯವಂತರು.

ತಡ ಮಾಡದೇ ವೇಳೆ ಮಿಂಚಿ ಹೋಗುತ್ತದೆಂದು ತಿಳಿದು ವಿರೂಪಾಕ್ಷಪ್ಪಗೌಡರು ಕೈಯಲ್ಲಿ ಗನ್ ಮತ್ತು ರಿವಾಲ್ವರ ಹಿಡಿದುಕೊಂಡು ಸಿದ್ಧರಾದರು. ಈ ಸುದ್ದಿ ಕೇಳಿದ ಬಾಂಬೆ ಕರ್ನಾಟಕದ ಗಡಿ ಕಾವಲಿಗಾಗಿ ನಿಯಮಿಸಿದ ನಾಲ್ಕು ಜನ ಪೊಲೀಸರು ಮತ್ತು ಒಬ್ಬ ಹವಾಲ್ದಾರ್ ಗೌಡರ ಮನೆಗೆ ಬಂದರು. ಎಲ್ಲರೂ ಸಜ್ಜಾಗಿ ಬಣಮೆಗೆ ಬೆಂಕಿ ಹಚ್ಚಿದ ಆ ಸ್ಥಳಕ್ಕೆ ಧಾವಿಸುತ್ತ ಹೊರಡುವುದರಲ್ಲಿಯೇ ಅದೇ ಆಗ ಹಗರಟಗಿಯಿಂದ ಗೌಡರ ಬಲಗೈ ಭಂಟನಾದ ಮಹಾಂತಗೌಡರು ಇದ್ದಕ್ಕಿಂದತೆ ಕೈಯಲ್ಲಿ ಬಂದೂಕು ಭರ್ಚಿಗಳನ್ನು ಹಿಡಿದುಕೊಂಡು ಓಡುತ್ತ ಬಂದು ವಿರುಪಾಕ್ಷಪ್ಪಗೌಡರನ್ನು ಕೂಡಿಕೊಂಡರು. ಮೂಕಾರ್ತಿ ಗುಡ್ಡದ ಓರೆಯನ್ನು ಇನ್ನೂ ಮುಟ್ಟಿರಲಿಲ್ಲ. ಅಷ್ಟರಲ್ಲಿ ಸಾಲವಾಡಗೆಯ ಕಾಂಗ್ರೆಸ್ ಕೇಂದ್ರದಲ್ಲಿದ್ದ ಹಗರಟಗಿ ಬಸವಂತರಾಯ ಗೌಡರು ಮತ್ತು ಕುಪ್ಪಿಯ ಹಣಮಂತ್ರಾಯಗೌಡರು ಹಾಗೂ ಆರೇಳು ಜನ ವಿರುಪಾಕ್ಷಪ್ಪಗೌಡರ ಅಭಿಮಾನಿ ಮಿತ್ರರು ಕೂಡಿಕೊಂಡು ಓಡುತ್ತ ಬಂದರು. (ಆಗ ಸಮಯ ಮಧ್ಯಾಹ್ನ ಎರಡು ಗಂಟೆಯಾಗಿರಬೇಕು)

ನೀವು ಮುಂದೆ ಹೋಗಬೇಡಿರಿ ಓ! ವಿರುಪಣ್ಣ ಮಹಾಂತಗೌಡ ಇದರಲ್ಲಿ ಏನೋ ರಜಾಕಾರರ ಮೋಸವಿದೆ. ಹೋಗಬೇಡಿರಿ ಎಂದು ಕೂಗುತ್ತ ಬೆನ್ನು ಹತ್ತಿದರು. ಆದರೂ ಅವರ ಮಾತುಗಳನ್ನು ಗೌಡರ ಗುಂಪಿನ ಜನ ಕೇಳಲಿಲ್ಲ ವಿರುಪಾಕ್ಷಪ್ಪಗೌಡರ ಜೊತೆಯಲ್ಲಿ ಬಿಜಾಪೂರ ಭಾಗದ ಪೊಲೀಸ ಪೇದೆಗಳಾದ ಭಗವಂತ, ಬಾಬೂಜಿ, ಚನ್ನಮಲ್ಲಯ್ಯ ಎಂಬ ಪೊಲೀಸರು, ಹಗರಟಗಿಯ ಮಹಾಂತಗೌಡರಿದ್ದರು.

ಹೀಗೆ ಎಲ್ಲರೂ ಕೂಡಿ ಬಣಮೆಗೆ ಬೆಂಕಿ ಹಚ್ಚಿದ ಸ್ಥಳದತ್ತ ಧಾವಿಸಿದರು. ಬಣವಿಯ ಆಸುಪಾಸಿನಲ್ಲಿ ಸುಳಿದಾಡುತ್ತಿದ್ದ ನಾಲ್ಕು ಜನ ಪಠಾಣರನ್ನು ವಿರುಪಾಕ್ಷಪ್ಪಗೌಡರು ನೋಡಿದರು. ಪಠಾಣರು ಈ ಮೊದಲೇ ಪಕ್ಕದ ಗ್ರಾಮಗಳ

ಕೆಲವು ಜನ ಮುಸ್ಲಿಂರನ್ನು ಕೂಡಿಕೊಂಡು ಹಿಂದಿನ ದಿನವೇ ಯಾರು ಯಾರು ಎಲ್ಲಿ ನಿಲ್ಲಬೇಕು, ಯಾವ ರೀತಿ ಅಖಾಡವನ್ನು ನಿರ್ಮಿಸಿಕೊಳ್ಳಬೇಕೆಂಬುದನ್ನು ನಿರ್ಧರಿಸಿ, ಬೆಟ್ಟದ ಕಲ್ಲುಬಂಡೆಗಳ ಹಿಂದೆ ಅವಿತುಕೊಂಡು ಕುಳಿತು ಪಠಾಣರು, ಸಾಲವಾಡಗಿಯಿಂದ ಯಾವ ದಿಕ್ಕಿನಿಂದ ವಿರುಪಾಕ್ಷಪ್ಪಗೌಡರು ಬರಬಹುದೆಂದು ಊಹಿಸಿ ಗನ್‌ಗಳನ್ನು ಹಿಡಿದುಕೊಂಡು ಸಿದ್ಧತೆಯಲ್ಲಿದ್ದರು. ಗೌಡರ ಬರುವಿಕೆಯನ್ನೇ ಕಾಯುತ್ತಿದ್ದ ಪಠಾಣರು ಆತನ ಬೇಟೆಯಾಡುವ ರೀತಿಯನ್ನು ಮನನ ಮಾಡಿಕೊಂಡಿದ್ದರು.

ಇದಾವುದೂ ವಿರೂಪಾಕ್ಷಪ್ಪಗೌಡರಿಗೂ ತಿಳಿದಿರಲಿಲ್ಲ. ಅಂತೆಯೇ ಅವರು ತಮ್ಮ ಸಂಗಡಿಗರೊಂದಿಗೆ ನೇರವಾಗಿ ಪಠಾಣರು ಒಡ್ಡಿದ್ದ ಅಖಾಡಕ್ಕೆ ಬಂದರು. ಕಣ್ಣಿಗೆ ಬಿದ್ದ ನಾಲ್ಕು ಜನ ಪಠಾಣರನ್ನು ಹೊಡೆಯಲು ಓಡುತ್ತಿದ್ದಂತೆ ಅವರು ಬೇಕೆಂದೇ ಅಂಜಿದವರಂತೆ ತಮ್ಮ ಜನರು ಅವಿತು ಕುಳಿತಿದ್ದ ಸ್ಥಳದತ್ತ ಸರಿಯುತ್ತ ಹೋದರು. ಇವರು ಬರುವುದನ್ನು ಕಂಡ ಪಠಾಣರು ಬೆಟ್ಟದ ಕಲ್ಬಂಡೆಗಳ ಮರೆಯಿಂದ ನೋಡಿ ಇದಕ್ಕಿಂತ ಸುವರ್ಣ ಕ್ಷಣ ಇನ್ನೆಂದಿಗೆ ಸಿಕ್ಕೀತು? ಎನ್ನುತ್ತ ವಿರೂಪಾಕ್ಷಪ್ಪಗೌಡರ ತಂಡದ ಮೇಲೆ ಗುರಿ ಇಟ್ಟು ಮಶಿನ್‌ಗನ್ ಗಳನ್ನು (ಸ್ಫೋಟಿಸಿದರು) ಹಚ್ಚಿದರು.

ಪಟ್ ಪಟ್ ಪಟಪಟ ಎಳ್ಳು ಹುರಿದಂತೆ ಗುಂಡುಗಳನ್ನು ಹಾರಿಸಿದರು. ಕ್ಷಣದಲ್ಲಿಯೇ ಗೌಡರ ಗುಂಪಿನಲ್ಲಿದ್ದ ಇಬ್ಬರು ಪೋಲೀಸರು ಪಠಾಣರ ಗುಂಡಿಗೆ ಅಹುತಿಯಾದರು.

ಆಗ ಗೌಡರು ಈ ಗಂಭೀರ ಮತ್ತು ಭಯಾನಕ ಭಯಂಕರವಾದ ಈ ಸನ್ನಿವೇಶವನ್ನು ಕಂಡು ಪಠಾಣರು ಬಹುಸಂಖ್ಯೆಯಲ್ಲಿಬಹುದೆಂದು ತಿಳಿದರು. ಹೇಗೆ ಮಾಡಿದರೆ ಇವರು ಅಂಜಿ ಹಿಂಜರಿಯಬಹುದು? ಹೀಗೆ ವಿಚಾರಿಸುತ್ತ ಹೊರಳಿ ನೋಡಿದರು. ಹತ್ತಾರು ಜನರೆದುರು ನೂರಾರು ಎದುರಾಳಿಗಳು! ಬಂದೂಕಿನ ಗುಂಡಿಗೆ ಮಶಿನ್‌ಗನ್‌ಗಳು ಎದುರಾದವು. ಅಷ್ಟರಲ್ಲಿಯೇ ತಮ್ಮ ಹಿಂದೆ ಅಡಿಗಿಕೊಂಡು ರಜಾಕಾರರು ಹಿಂದಿನಿಂದ ಸುತ್ತುವರೆದು ಬರುವುದನ್ನು ಗೌಡರು ಕಂಡರು. ಸುತ್ತುವರೆದ ರಜಾಕಾರರ (ಪಠಾಣರ) ಗುಂಪಿನ ಮಧ್ಯದಲ್ಲಿ ವಿರುಪಾಕ್ಷಪ್ಪಗೌಡ ಮತ್ತು ಮಹಾಂತಗೌಡ ಹಾಗೂ



ಪೋಲೀಸರು ಚಕ್ರವ್ಯೂಹದೊಳಗೆ ಸಿಕ್ಕುಬಿದ್ದ ವೀರ ಅಭಿಮನ್ಯುವಿನಂತೆ ಸಿಕ್ಕುಬಿದ್ದರು. ಆದರೂ ಗೌಡರು ಎದೆಗುಂದಲಿಲ್ಲ. ಕಲ್ಬಂಡೆಗಳ ಪಕ್ಕದಲ್ಲಿ ಹಿಂದಿನ ಬದಿಯಲ್ಲಿದ್ದ ಸಂದಿಯಲ್ಲಿದ್ದ ಜವಾನರೂ ಕೋವಿಗಳನ್ನು ತುಂಬಿಕೊಂಡರು, ಬಂಡೆಯ ಮರೆಯಿಂದಲೇ ಗುಂಡು ಹಾರಿಸತೊಡಗಿದರು. ಸೇರಿಗೆ ಸವ್ವಾಸೇರು ಎಂಬಂತೆ ಗೌಡರು ಮಂಡಿಯೂರಿ ಸ್ಟ್ಯಾಂಡ್ ಗನ್ನಿನಿಂದ ಮೂರ್‍ನಾಲ್ಕು ಜನ ಪಠಾಣರನ್ನು ನೆಲಕ್ಕುರುಳಿಸಿದರು. ಗೌಡರ ಗುಂಡಿಗೆ ಸವಾಲಾಗಿ ಪಠಾಣರು ಮತ್ತಷ್ಟು ಕೋಪದಿಂದ ಗೌಡರು "ಇಲಿಯಾಗಿ ನೂರು ವರುಷ ಬದುಕುದಕ್ಕಿಂತ ಹುಲಿಯಾಗಿ ಮೂರು ದಿವಸ ಬದುಕಿದರೆ ಸಾಕು ಸತ್ತರೆ ಸ್ವರ್ಗ ಉಳಿದರೆ ಜಯ" ಹೆದರಬೇಡಿರಿ ಎಂದು ತಮ್ಮ ಸಂಗಡಿಗರಿಗೆ ಹುರಿದುಂಬಿಸಿದರು. ಸುಮಾರು ಇಪ್ಪತ್ತೈದು ನಿಮಿಷಗಳವರೆಗೆ ಗುಂಡಿನ ಚಕಮುಕಿ ನಡೆಯಿತು. ಇದರಲ್ಲಿ ಮತ್ತೀರ್ವ ಪೋಲೀಸರು ಪಠಾಣರ ಗುಂಡಿಗೆ ಆಹುತಿಯಾದರು. ಕೆಲವು ಜನ ಹೋರಾಟಗಾರರು ಸತ್ತದ್ದನ್ನು ಕಂಡು ಪಠಣರು ಮತ್ತೆ ವಿರೂಪಾಕ್ಷಪ್ಪಗೌಡರ ಮೇಲೆ ಗುಂಡು ಹಾರಿಸಿದರು. ಗುಂಡುಗಳನ್ನು ಒಂದೇ ಸವನೆ ಅವರೆಲ್ಲರ ಮೇಲೆ ಹಾಯ್ದು ಹೋಗುತ್ತಿದ್ದವು. ಗುಂಡಿನ ಮಳೆಗೈಯುತ್ತ ಪಠಾಣರ ಗುಂಡುಗಳು ಗೌಡರ ಪಕ್ಕದಲ್ಲಿಯೇ ಸುಂಯ್ ಗುಡುತ್ತ ಎದುರಿನ ಬಂಡೆಗಳಿಗೆ ಬಡಿಯಿತ್ತಿದ್ದವು. ಕೆಲವು ಗಾಳಿಯಲ್ಲಿ ಹಾರಿದವು. ಬಹುಪಾಲು ಗಿಡಗಂಟಿಗಳಲ್ಲಿ ಹೊಕ್ಕವು. ಗೌಡರ ಬಲಗೈ ಭಂಟ ಮಹಾಂತಗೌಡರ ಎಡಬಿಡದೇ ಗುಂಡು ಹಾರಿಸುತ್ತಿದ್ದರು. ಅಷ್ಟರಲ್ಲಿ ಪಠಾಣರು ಮರೆಯಿಂದ ಹಾರಿಸಿದ ಗುಂಡು ಜೋರಾಗಿ ಬಂದು ಮಹಾಂತಗೌಡರಿಗೆ ತಗುಲಿತು. ತಕ್ಷಣವೇ ಮಹಾಂತಗೌಡರು ಪೂಟಿನೆತ್ತರ ಮೇಲೆ ಹಾರಿ ಕೆಳಗೆ ಬಿದ್ದರು. ಗುಂಡು ಮಹಾಂತಗೌಡರ ಹೊಟ್ಟೆಯನ್ನು ಭೇದಿಸಿತ್ತು ಕುರುಳು ಬಿದ್ದವು. ಇದನ್ನು ಕಣ್ಣಾರೆ ಕಂಡ ವಿರುಪಾಕ್ಷಪ್ಪಗೌಡರು. ಹಾ ! ಗೆಳೆಯಾ ಮಹಾಂತಗೌಡ ನನ್ನನ್ನು ತೊರೆದೆಯಾ? ಅಹಾ ! ವಿಧಿಯೇ ನನ್ನ ಬಲಗೈ ಭಂಟನನ್ನೂ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ ವೀರನನ್ನು ಬಲಿತೆಗೆದು ಕೊಂಡೆಯಾ? ಎಂದು ಮನದಲ್ಲಿಯೇ ಸಂಕಟಿಸಿದರು. ಬಹಳ ಹೊತ್ತು ನೋಡಲು ಸಮಯವೆಲ್ಲಿ ಬರಬೇಕು? ಅದು ಹೋರಾಟದ ಬಯಲಲ್ಲವೇ ಮಹಾಂತಗೌಡರ ಸ್ಥಿತಿ ವಿಚಿತ್ರ ತನ್ನ ಗೌರವನೀಯ ಮುಖಂಡನನ್ನು ಈ

ರಾಕ್ಷಸ (ಪಠಾಣ)ರು ನನ್ನದು ಮುಗಿಯಿತು ನೀರು ನೀರು ಎನ್ನತ್ತಲೇ ಮಹಾಂತಗೌಡರ ಪ್ರಾಣ ಪಕ್ಷಿ ದೇಹದಿಂದ ಹಾರಿ ಹೋಗಿತ್ತು.

ಈಗ ವಿರುಪಾಕ್ಷಪ್ಪಗೌಡರು ಏಕಾಂಗಿ. ಸುತ್ತಲೂ ಹತ್ತಿಪ್ಪತ್ತು ಜನ ಪಠಾಣರು ಅವರೆಲ್ಲರ ಕೈಯಲ್ಲಿ ಬೆಂಕಿಯನ್ನು ಕಾರುತ್ತಿದ್ದ ಗನ್ನುಗಳು. ಈ ಸುದ್ದಿ ಕೇಳಿ ಹಳ್ಳಿಗರು ಚಿಂತಾಜನಕರಾದರು. ತನ್ನೊಡನೆ ಹೋರಾಡಲು ಬಂದ ವಿಶ್ವಾಸಿಕ ವೀರ ಮಿತ್ರರನ್ನು ಹಾಗೂ ನಾಲ್ಕು ಜನ ಪೊಲೀಸರನ್ನು ಕಳೆದುಕೊಂಡರು. ಏಕಾಂಗಿಯಾದರೂ ಗೌಡರು ಎದೆಗುಂದಲಿಲ್ಲ. ಅಂಜಿ ಹಿಂಜರಿಯಲಿಲ್ಲ. ಗನ್ನು ಗುಂಡಿಲ್ಲದೆ ಖಾಲಿಯಾಗಿತ್ತು. ಪಿಸ್ತೂಲನ್ನು ತೆಗೆದು ಗುರಿ ನೋಡಿ ಕುದುರೆ ಒತ್ತುವಷ್ಟರಲ್ಲಿಯೇ ಇದನ್ನು ಕಂಡ ಪಠಾಣನೋರ್ವ ಗುರಿಯಿಟ್ಟು ವಿರೂಪಾಕ್ಷಪ್ಪಗೌಡರತ್ತ ಗುಂಡು. ಹಾರಿಸಿದನು. ಕಾರಂಜಿಯಂತೆ ರಕ್ತ ಪುಟಿಯತೊಡಗಿತು. ಅನಿರೀಕ್ಷಿತವಾಗಿ ಗೌಡರಿಗೆ ಗುಂಡು ಬಡಿದಾಗ ಗೌಡರು ತತ್ತರಿಸಿ ಹೋದರು. ಮರುಕ್ಷಣದಲ್ಲಿಯೇ ತನ್ನನ್ನು ತಾನು ಹಿಡಿತಕ್ಕೆ ತಂದುಕೊಂಡು ಪರಸ್ಥಿತಿಯ ಗಂಭೀರತೆಯನ್ನರಿತುಕೊಂಡು ಮೈಯಲ್ಲಾ ರಕ್ತ ಹರಿದು ಉಟ್ಟ ಬಟ್ಟೆ ಕೆಂಪಾಗಿ ತನ್ನ ಸ್ವರೂಪವನ್ನು ಬದಲಿಸಿದವು. ಹಸಿದ ಹುಲಿಯಂತೆ ಕೆರಳಿದ ಕೇಸರಿಯಂತೆ ಸಾವಕಾಶವಾಗಿ ಮೇಲೆದ್ದು ನಿಂತ. ಗುರಿಯಲ್ಲಿ ಪಳಗಿದ ಗೌಡರು ಪಠಾಣನಿಗೆ ಗುರಿ ಇಟ್ಟು ಪಿಸ್ತೂಲಿನ ಕುದುರೆಯನ್ನು ಅದುಮಿದರು ಗುಂಡು ರಾಕ್ಷಸ ರೂಪಿ ಪಠಾಣನ ಎದೆಯನ್ನು ಭೇದಿಸಿತು. ನಾಲ್ಕಾರು ಅಡಿ ದೂರಸರಿದು ಹೆಣ ನೆಲಕಚ್ಚಿತು. ಗೌಡರ ಗುರಿ ಮತ್ತು ಧೈರ್ಯ ಸ್ಥೈರ್ಯವನ್ನು ಕಂಡು ಪಠಾಣರು ಕಕ್ಕಾಬಿಕ್ಕಿಯಾದರು. ಈಗ ಪಠಾಣರು ಮತ್ತಷ್ಟು ಕೋಪೋದ್ರೇಕರಾಗಿ ಫೈಯರ್ ಮಾಡಿದರು. ಕೆಲವು ಗುಂಡುಗಳು ಗಾಳಿಯಲ್ಲಿ ಹಾರಿದವು ಬಹುಪಾಲು ಕೆಳಗಿದ್ದ ಬಂಡೆಗಳಿಗೆ ಬಡಿದವು. ಇಂಥ ಒಂದು ಗುಂಡಿನ ಸುರಿಮಳೆಯಲ್ಲಿದ್ದ ಗೌಡರು ತಪ್ಪಿಸಿಕೊಳ್ಳುವುದಾಗಲೀ ಹೇಡಿಯಂತೆ ಹಿಂಜರಿದು ಕಾಲಿಗೆ ಬುದ್ಧಿ ಹೇಳುವುದಾಗಲಿ ಮಾಡಲಿಲ್ಲ. ಏಕಾಂಗಿ ವೀರನಾಗಿ ಹೋರಾಡಿದರು ಮತ್ತೊಮ್ಮೆ ಮಗದೊಮ್ಮೆ ಗುಂಡುಗಳನ್ನು ಹಾರಿಸಿ ಕೋಪೋದ್ರೇಕರಾಗಿ ಪುಃನ ಗುಂಡು ಹಾರಿಸಬೇಕೆಂದರೆ ರಿವಾಲ್ವಾರಿನಲ್ಲಿದ್ದ ಗುಂಡುಗಳೂ ತೀರಿಹೋಗಿದ್ದವು. ಹೋರಾಡಲು



ಗುಂಡುಗಳಿಲ್ಲ ಕೈಯಲ್ಲಿ ಖಡ್ಗ ಭರ್ಚಿಗಳಿಲ್ಲ ಗೌಡರ ಅದೃಷ್ಟ ಸರಿಯಿರಲಿಲ್ಲವೆಂದೇ ಹೇಳಬೇಕು.

ನಿಶ್ಯಸ್ತ್ರನಾಗಿ ಎದ್ದು ನಿಲ್ಲುತ್ತಲೇ ಒಬ್ಬ ಪಠಾಣ ಮರೆಯಿಂದ ತಲೆಗೆ ಗುಂಡು ಹಾರಿಸಿದ ಪಠಾಣನ ಆ ಗುಂಡು ಗಂಡೆದೆಯ ಗೌಡರ ಬಲಗಣ್ಣನ್ನು ಭೇದಿಸಿಕೊಂಡು ಹೊರ ಹಾರಿತು. ಗೌಡರ ಕಣ್ಣಿಗೆ ಕತ್ತಲು ಕವಿಯಿತು. ಅಷ್ಟರಲ್ಲಿ ಮತ್ತೊಂದು ಗುಂಡು ಬಂದು ಗೌಡರ ಎದೆಗುಂಡಿಗೆಗೆ ಬಡಿಯಿತು. ಆಗ ವಿರೂಪಾಕ್ಷಪ್ಪಗೌಡರು ಸಿಂಹವು ನೆಲಕ್ಕುರುಳಿದಂತೆ ವಾಲಿದರು. ನೀರು ನೀರು ಎಂದು ಕೂಗಿದರು ಗಂಟಲು ಕಟ್ಟಿತು. ಆದರೆ ಆಗಲೇ ಗೌಡರ ಜೀವನ ಯಾತ್ರೆ ಮುಗಿದಿತ್ತು. ಆಗ ಅವರಿಗೆ ವಯಸ್ಸು ಇಪ್ಪತ್ತೂ್ರಾಗಿತ್ತು. ಅವರ ಜಾತಕ ಸತ್ಯವಾಗಿತ್ತು. ವಿರೂಪಾಕ್ಷಪ್ಪಗೌಡರು ಅಮರ ಪಾದಾರೂಢರಾದರು. ಸ್ವಾತಂತ್ರ್ಯದೇವಿಯ ಪ್ರೀತಿಯ ಪುಷ್ಪವಾಗಿ ಅವಳ ಪಾದ ಸೇರಿದರು. ಹುತಾತ್ಮರಾದರು. ೧೯೪೮ ನೇ ಇಸ್ವಿ ಮೇ ತಿಂಗಳು ಕೊನೆಯವಾರ ಶನಿವಾರದಂದು ವಿರುಪಾಕ್ಷಪ್ಪಗೌಡರು ಸುರಪುರದ ಇತಿಹಾಸದ ಪುಟದಲ್ಲಿ ಸೇರಿದರು. ಮೂಕಾರ್ತಿ ಗುಡ್ಡದಡಿಯಲ್ಲಿ ವಿರೂಪಾಕ್ಷಪ್ಪಗೌಡರು ಹುತಾತ್ಮರಾದ (ಮಡಿದ, ಸುದ್ದಿ ಕಾಳ್ಗಿಚ್ಚಿನಂತೆ ಸುತ್ತಲಿನ ಹಳ್ಳಿಗಳಲ್ಲಿ ಪಸರಿಸಿತು. ಮನೆ ಮಠಗಳಲ್ಲಿ ರಸ್ತೆಗಳಲ್ಲಿ ಕೇರಿ ಕೇರಿಗಳಲ್ಲಿ ಎಲ್ಲೆಲ್ಲೂ ಜನರ ಕಣ್ಣೀರಕೋಡಿ ಹರಿಯಿತು. ಹುತಾತ್ಮನ ಗುಣಗಾನ.

ವಿರುಪಾಕ್ಷಪ್ಪಗೌಡರ ಪಾರ್ಥಿವ ಶರೀರವನ್ನು ನೋಡಬೇಕೆಂದು ಗುಂಪು ಗುಂಪಾಗಿ ಸುತ್ತಲಿನ ಹಳ್ಳಿಗಳ ಜನರು ಓಡೋಡಿ ಬರತೊಡಗಿದರು. ಆದರೆ ಅಷ್ಟರಲ್ಲಿ ರಜಾಕಾರರು (ಪಠಾಣರು) ದೇಶಭಕ್ತ ವಿರೂಪಾಕ್ಷಪ್ಪಗೌಡರ ಮೃತ ದೇಹವನ್ನು ಮತ್ತು ನಾಲ್ಕು ಜನ ಪೊಲೀಸ್ ( ದೇಶಭಕ್ತರು)ರ ಮೃತದೇಹವನ್ನು ತೆಗೆದುಕೊಂಡು ಹುಣಸಗಿಗೆ ಹೊರಟು ಹೋಗಿದ್ದರು. ಈ ಸಮಾಚಾರವನ್ನು ತಿಳಿದು ತಾಯಿ ಗೌರಮ್ಮಗೌಡಾಶಾನಿಯವರು ಹುಣಸಗಿಗೆ ಬಂದರು. ಆದರೆ ಆ ಕ್ರೂರ ರಕ್ಕಸ ಪಠಾಣರು ಏಕೈಕ ಪುತ್ರನ ಅಂತಿಮ ದರ್ಶನಕ್ಕೂ ಕೂಡಾ ಅನುಮತಿ ನೀಡಲಿಲ್ಲ. ಅಂತಿಮ ಸಂಸ್ಕಾರಕ್ಕೂ ಅನುಮತಿ ನೀಡಲಿಲ್ಲ. ಬಿಕ್ಕಿ ಬಿಕ್ಕಿ ಅತ್ತಳು. ನೆಲಕ್ಕೆ ಬಿದ್ದು ಹೊರಳಾಡಿದಳು. ಕಣ್ಣೀರು ಕೋಡಿಯಾಗಿ ಹರಿಯಿತು. ತಾಯಿಗಾದ ಆ ಆಘಾತ ದೇವರಿಗೇ ಗೊತ್ತು.

ಗೌಡರು ಹುತಾತ್ಮರಾದ ಸಮಾಚಾರ ತಿಳಿಯುತ್ತಲೇ ಆಗ ತಾಳಿಕೋಟೆಯಲ್ಲಿದ್ದ ಹೈದ್ರಾಬಾದ್ ವಿಮೋಚನೆ ಸಂಗ್ರಾಮದ ಮುಂದಾಳುಗಳಾಗಿದ್ದ ಸುರುಪುರದ ಬ್ಯಾರಿಸ್ಟರ್ ಶ್ರೀ ರಾಜಾವೆಂಕಟಪ್ಪನಾಯಕರು ಗಡಿ ಭದ್ರತಾ ಸೈನ್ಯ (ಮಿಲಿಟರಿ) ದೊಂದಿಗೆ ಹುಣಸಗಿಗೆ ಧಾವಿಸಿದರು. ಕಾಲವು ಮಿಂಚಿಹೋಗಿತ್ತು. ಆಗಲೇ ಕಾಂಗ್ರೆಸ್ ಕಾರ್ಯಕರ್ತರು ಹಗರಟಗಿಯ ಮಹಾಂತಗೌಡರ ಕಳೇಬರವನ್ನ ಎತ್ತಿನ ಬಂಡಿಯಲ್ಲಿ ಹಾಕಿಕೊಂಡು ಹೋಗಿ ತಾಳಿಕೋಟೆಯ ಪಕ್ಕದಲ್ಲಿದ್ದ ಡೋಣಿಯ ದಡದಲ್ಲಿ ಸಂಸ್ಕಾರ (ಸಮಾಧಿ) ಮಾಡಿದರು.

ಇತ್ತ ಹುತಾತ್ಮ ವೀರ ವಿರೂಪಾಕ್ಷಪ್ಪಗೌಡರ ಮತ್ತು ನಾಲ್ಕು ಜನ ಪೊಲೀಸರು ಶವ ಹೊತ್ತ ರಜಾಕಾರರ ಜೀಪು ಹುಣಸಗಿಯ ಕರುಡಗಿರಿಯ ಮುಂದೆ ಬಂದು ನಿಂತಿತು. (ಅಂದಿನ ಕರುಡಿಗಿರಿ ಇಂದಿನ ಪೋಸ್ಟ್ ಆಫೀಸ್) ರಜಾಕಾರರ ಸಹಸ್ರಾರು ದುಃಖತಪ್ತ ಜನರ ಸಮ್ಮುಖದಲ್ಲಿಯೇ ಹುಣಸಗಿಯ ಊರ ಮುಂದಿನ ಚಿಕ್ಕ ಹಳ್ಳದ ಊರ ಕಡೆಯ ಹನುಮಂತದೇವರ ಗುಡಿಯಿಂದ ಸುಮಾರು ನಾಲ್ಕೈದು ನೂರು ಅಡಿಗಳ ಅಂತರದಲ್ಲಿ ಕೋಳೂರ ಕೇಸರಿ ಶ್ರೀ ವಿರೂಪಾಕ್ಷಪ್ಪಗೌಡರ ಅಂತ್ಯ ಸಂಸ್ಕಾರವನ್ನು ಮಾಡಿದರು.

ವಿರುಪಾಕ್ಷಪ್ಪಗೌಡರು ತನ್ನ ಶೌರ್ಯ ಸಾಹಸಗುಣಗಳಿಂದ ವೀರಯೋಧ ರಾಜನಕೋಳೂರು ಓಜಯ ಪುತ್ರನೆಂದೂ ಹೈದ್ರಾಬಾದ ಕರ್ನಾಟಕದ ಕನ್ನಡಿಗರ ಮನೆ ಮಾತಾಗಿದ್ದಾರೆ. ಅವರ ಬದುಕು ಆದರ್ಶವಾದುದು ಸ್ಪೂರ್ತಿದಾಯಕವಾದುದು. ನಮ್ಮ ಜನ ಅವರ ಶೌರ್ಯ ಸಾಹಸಗಳ ಬಗ್ಗೆ ಹಲವಾರು ಕಥೆಗಳನ್ನು ಕಟ್ಟಿ ಅವರನ್ನು ಕೊಂಡಾಡಿದ್ದಾರೆ. ಕವಿಗಳು ಕಾವ್ಯ ರಚಿಸಿ, ಲಾವಣಿಕಾರರು ಲಾವಣಿ ಹಾಡುಗಳನ್ನು ರಚಿಸಿ ಗೌರವ ತೋರಿದ್ದಾರೆ.

ಏನಾದರೇನು ; ವಿರುಪಾಕ್ಷಪ್ಪಗೌಡರನ್ನು ಯಾರೂ ಎಂದೂ ಮರೆಯುವ ಹಾಗಿಲ್ಲ. ಅವರು ಹೆಸರು ಅಮರವಾಗಿದೆ. ಗೌಡರಿಂದು ಇಲ್ಲ ಅವರ ಭೌತಿಕ ಶರೀರ ನಮ್ಮಿಂದ ಕಣ್ಮರೆಯಾಗಿದ್ದರೂ ಅವರ ಆತ್ಮ ಮಾತ್ರ ದೂರಾಗಿಲ್ಲ.



ವಿರುಪಾಕ್ಷಪ್ಪಗೌಡರು ಹುತಾತ್ಮರಾದ ಮೂರುವರೆ ತಿಂಗಳಲ್ಲಿಯೇ ಅಂದರೆ ೧೭ (೧೮) ನೇ ಸಪ್ಟೆಂಬರ್ ೧೯೪೮ ರಲ್ಲಿ ಹೈದ್ರಾಬಾದ್ ಸಂಸ್ಥಾನವು ಭಾರತದ ಒಕ್ಕೂಟದಲ್ಲಿ ಒಂದಾಯಿತು. ಅವರ ಕನಸು ನನಸಾಯಿತು.

## ಸರ್ದಾರ ಶರಣಗೌಡ ಇನಾಮದಾರ ಅಭಿಪ್ರಾಯ

ನಾವು ಎಡ್ರಾಮಿ , ಕೆಂಭಾವಿ, ಹುಣಸಗಿ, ನೆಲೋಗಿಗಳ ಪೊಲೀಸ್ ಠಾಣೆಗಳನ್ನು ವಶಪಡಿಸಿ ಗಡಿಯೊಳಕ್ಕೆ ಮೂವತ್ತು ಮೈಲಿನವರೆಗಿನ ಪ್ರದೇಶಗಳನ್ನು ಸ್ವತಂತ್ರಗೊಳಿಸಿದೆವು.

ಹುಣಸಗಿ ತಾಲೂಕಿನ ರಾಜನಕೋಳೂರು ಭಾಗದಲ್ಲಿ ( ಮಾಳನೂರ ಹತ್ತಿರ ) ಆದ ಅಶಸ್ತ್ರ ಘರ್ಷಣೆಯಲ್ಲಿ ವಿರೂಪಾಕ್ಷಪ್ಪಗೌಡ ಮತ್ತು ಮಹಾಂತಗೌಡ ಹಾಗೂ ಐವರು ಪೊಲೀಸರು ಸತ್ತರು. ಮಹಾಂತಗೌಡರ ಹೆಣವನ್ನು ಗಾಡಿಯಲ್ಲಿ ಹಾಕಿ ತಂದೆವು. ಈ ಭಾಗದಲ್ಲಿ ಘರ್ಷಣೆಗಳು ದಿನನಿತ್ಯದ ಮಾತಾದವು. ಗಡಿಭಾಗದ ಜನರ ರಕ್ಷಣೆ ಮತ್ತು ರಜಾಕಾರರ ಜೊತೆ ಹೋರಾಟ ಈ ಪ್ರಸಂಗದಲ್ಲಿ ನಮ್ಮ ಜೊತೆಗಾರರು ಜೀವದ ಹಂಗು ತೊರೆದು ಕೆಲಸ ಮಾಡುತ್ತಿದ್ದರು.

ಮೇ, ೧೯೪೮ ರಲ್ಲಿ ಮುಂಬೈಯಲ್ಲಿ ಎ.ಆಯ್.ಸಿ.ಸಿ. ಸಭೆ ನಡೆದಾಗ ನಾನು ಜನಾರ್ದನರಾವ್ ದೇಸಾಯಿ ಡಾ॥ ಕಂಠಿ ಇವರುಗಳು ಹೋಗಿದ್ದೆವು. ಅಲ್ಲಿ ವಲ್ಲಭ ಬಾಯಿ ಪಟೇಲರನ್ನು ಭೇಟಿಯಾಗಿ ಪೊಲೀಸ್ ಆಕ್ಷನ್‌ಗೆ ಒತ್ತಾಯಿಸಿದೆವು. ಇದರ ಜೊತೆ ಗಡಿಭಾಗದಲ್ಲಿ ಕಾರ್ಯಾಚರಣೆ ಸಾಗಿತು.

## ಬಸಣ್ಣನವರ ಅಭಿಪ್ರಾಯ

ನಮ್ಮದು ಕೇಂದ್ರಸ್ಥಾನ ಬಂಡೆಪ್ಪನಳ್ಳಿ. ಸಾಲವಾಡಗಿಯಾಗಿದ್ದರೂ ಬಿಳೇಭಾವಿ, ಭಂಟನೂರ, ನಾಗರಬೆಟ್ಟ ಮುಂತಾದ ಹಲವು ಗ್ರಾಮಗಳು ಸೇರಿದ್ದವು. ಅಪ್ಪಾರಾಯರ ಮೇಲ್ವಿಚಾರಣೆ ನಮ್ಮ ಮುಖ್ಯವಾದ ಕೆಲಸ. ರಾತ್ರಿಯಲ್ಲೆಲ್ಲಾ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಅಲೆದಾಡುವುದು. ಎಲ್ಲ ಗ್ರಾಮಗಳ ಕುಲಕರ್ಣಿ ಪೊಲೀಸ್ ಪಾಟೀಲರನ್ನು ಭೇಟಿ ಮಾಡುವುದು. ಮತ್ತು ಕೇಂದ್ರಕ್ಕೆ ಮಾಹಿತಿಯನ್ನು ಒದಗಿಸುವುದು ಆಗಿತ್ತು. ಸುತ್ತಲಿನ ಹಳ್ಳಿಗಳಿಂದ ಜನರು ಈ

ಶಿಬಿರಗಳಲ್ಲಿ ಬಂದು ಸೇರ ಹತ್ತಿದರು. ಹಗರಟಗಿಯ ಮಹಾಂತಗೌಡ ಮತ್ತು ರಾಜನ ಕೊಳೂರಿನ ವಿರೂಪಾಕ್ಷಪ್ಪಗೌಡ ಇವರು ನಮ್ಮ ಶಿಬಿರಗಳಲ್ಲಿದ್ದರು. ಈ ಇಬ್ಬರೂ ವೀರ ಯೋಧರು ತೀಕ್ಷ್ಣವಾಗಿ ಆಕ್ರಮಣಗೈಯುವವರು. ಚಟುವಟಿಕೆ ಕೂಡಾ ತೀವ್ರ. ಕೆಲವೊಮ್ಮೆ ಉಗ್ರ ಸ್ವರೂಪದಾಗಿರುತ್ತಿದ್ದವು. ಇವರು ಹೈದ್ರಾಬಾದ್ ರಾಜ್ಯದ ಸೀಮೆಯೊಳಗೆ ಬರುವ ಗ್ರಾಮಾಂತರ ಪ್ರದೇಶಗಳಲ್ಲಿ ನುಗ್ಗಿ ರಾಜ್ಯದ ರಕ್ಷಕ ದಳದವರನ್ನೆದುರುಗೊಂಡು ಹಿಮ್ಮೆಟ್ಟಿಸುತ್ತಿದ್ದರು. ಇದಕ್ಕಾಗಿಯೇ ಆಕ್ರಮಣ ಮಾಡುತ್ತಿದ್ದೆವು. ನಾವೂ ನಮ್ಮ ಕ್ಯಾಂಪುಗಳು ಸೀಮಾ ಪ್ರಾಂತಗಳಿಗೆ ಸೇರಿದವುಗಳಾಗಿದ್ದವು. ಮಗ್ಗುಲಿನ ಗ್ರಾಮಗಳು ಹೈದ್ರಾಬಾದ್ ರಾಜ್ಯಕ್ಕೆ ಸೇರಿದ್ದವು. ಗಡಿಕಾವಲಿಗಾಗಿ ರಜಾಕಾರರ ಸೈನ್ಯವು ಅಲ್ಲಿ ನೇಮಕವಾಗಿತ್ತು. ನಾವು ಸಕಲ ಸನ್ನಾಹಗಳಿಂದಲೇ ಸಿದ್ಧರಾಗಿ ಗಡಿಯಲ್ಲಿರುವ ಗ್ರಾಮಗಳತ್ತ ನಡೆಯುತ್ತಿದ್ದೆವು. ಆಕಸ್ಮಾತ್ ಆಕ್ರಮಣ ಜರುಗಿದರೂ ಅದನ್ನೆದುರಿಸಲು ಸಿದ್ಧವಾಗಿಯೇ ಇರುತ್ತಿದ್ದೆವು.

## ಸನ್ಮಾನ

ದಿನಾಂಕ ೯–೧೦–೧೯೭೬ ರಂದು ಸುರಪುರದ ಸರದಾರ್ ವಲ್ಲಭ ಬಾಯಿ ಪಟೇಲ್ ಸಮಿತಿಯವರು ಹಮ್ಮಿಕೊಂಡ ಹುತಾತ್ಮ ಸುರಪುರದ ಬಲವಂತ ಬಹಿರ ಬಹಾದ್ದೂರ ರಾಜಾ ವೆಂಕಟಪ್ಪ ನಾಯಕರ ಭಾವಚಿತ್ರದ ಅನಾವರಣ ಸಮಾರಂಭದಲ್ಲಿ ರಾಜನಕೋಳೂರಿನ ಹುತಾತ್ಮ ವಿರುಪಾಕ್ಷಪ್ಪಗೌಡರ ಧರ್ಮಪತ್ನಿಯವರಾದ ಶ್ರೀಮತಿ ಗಂಗಮ್ಮನವರನ್ನು ಕರೆಯಿಸಿ ಬೃಹತ್ ಪ್ರಮಾಣದಲ್ಲಿ ಸನ್ಮಾಯಿಸಲಾಯಿತು.

ತನ್ನ ಅದ್ವಿತೀಯ ಬಲಿದಾನದಿಂದ ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯವನ್ನೇ ಅಲುಗಾಡಿಸಿ ಸಡಿಲುಗೊಳಿಸಿದ್ದ ಹುತಾತ್ಮರ ಮುಕುಟ ಮಣಿಯಂದು ಖ್ಯಾತಿವೆತ್ತ ಸರದಾರ್ ಭಗತಸಿಂಗ್‌ರವರ ಸಹೋದರರೂ ಸ್ವಯಂ ಉಜ್ವಲ ದೇಶ ಭಕ್ತರೂ ಆದ ಸರದಾರ ಕುಲ್ತಾರಸಿಂಗ್ ಮತ್ತು ಅಮರ ಶಹೀದ ರಾಜಗುರುವಿನ ಅಣ್ಣಂದಿರರೂ ಆದಂತಹ ಶ್ರೀ ದಿನಕರ ಹರಿರಾಜಗುರು ಮತ್ತು ಅಮರ ಶಹೀದ್ ರಾಜಗುರುವಿನ ಸಹೋದರಿಯಾದ ಶ್ರೀಮತಿ ಗೋದಾವರಿಬಾಯಿ



ಪಾಂಡೆ ಕ್ರಾಂತಿಕಾರ ಶ್ರೀ ರಾಜಾ ವೆಂಕಟಪ್ಪನಾಯಕರ ವಂಶಜರಾದ ಶ್ರೀ ರಾಜಾ ವೆಂಕಟಪ್ಪನಾಯಕ ತಾತಾ ಇವರೆಲ್ಲರ ಸಮ್ಮುಖದಲ್ಲಿ ಶ್ರೀಮತಿ ಗಂಗಮ್ಮನವರಿಗೆ ಬೃಹತ್ ಪ್ರಮಾಣದಲ್ಲಿ ಶಾಲು ಹೊದಿಸಿ ಸನ್ಮಾನಿಸಲಾಯಿತು. ಅಂದಿನ ಆ ಸನ್ಮಾನ ಸಮಾರಂಭದ ಕಾರ್ಯಕ್ರಮದ ಸಂಯೋಜನೆಯನ್ನು ಹುಣಸಗಿಯ ಶ್ರೀ ಮಹಾಂತಸ್ವಾಮಿಗಳು ಮಾಡಿದರು.

ನಾರಾಯಣಪುರ ಎಡದಿಂದ ಕಾಲುವೆಯ ೩೬ನೆಯ ಕಿ.ಮೀ ಹಂತದಲ್ಲಿ ಕಾಲುವೆಗೆ ನೇರವಾಗಿ ಭೀಮಾ ಸಿರೀಜಿನ ಗುಡ್ಡಗಳ ಸಾಲು ಎದುರಾಗುತ್ತದೆ. ಇದನ್ನು ಹಾಯಲು ೧೦–೧೦ ಮೀಟರ ವ್ಯಾಸ ಉಳ್ಳ ಕುದುರೆ ಲಾಳದ ಆಕಾರ ಉಳ್ಳ ೩೦೦೩ ಮೀಟರ ಉದ್ದದ ಸುರಂಗವನ್ನು ನಿಯೋಜಿಸಲಾಗಿದೆ. ಈ ಸುರಂಗವು ರಾಜನಕೋಳೂರಿಗ ಸಮೀಪ ಇರುವದರಿಂದ ಇದಕ್ಕೆ ಇಲ್ಲಿಯವರೆಗೆ " ರಾಜನಕೋಳೂರು ಸುರಂಗವೆಂದು ಕರೆಯಲಾಗುತ್ತಿತ್ತು. ಈಗ ಕರ್ನಾಟಕ ಸರಕಾರದ ಪಿ.ಡಬ್ಲ್ಯೂ.ಡಿ. ೧೫೧ ಜಿ.ಯು.ಕೆ ೮೩ ದಿನಾಂಕ ೦೬–೦೩–೧೯೮೪ರ ಆಜ್ಞೆ೦ಯು ಮೇರೆಗೆ ಹುತಾತ್ಮರಾದ "ಶ್ರೀ ವಿರೂಪಾಕ್ಷಪ್ಪಗೌಡ ಸುರಂಗ ಮಾರ್ಗ" ಎಂದು ಹೆಸರಿಡಲಾಗಿದೆ.

ಈ ಸುರಂಗವು ಪ್ರತಿ ಸೆಕೆಂಡಿಗೆ ೯,೦೦೦ ಘನ ಅಡಿ ನೀರನ್ನು ಹೊರ ಬಿಡುತ್ತದೆ. ಸುರಂಗದಲ್ಲಿ ನೀರು ಪ್ರತಿ ಸೆಕೆಂಡಿಗೆ ೧೧ ಅಡಿ ವೇಗದಲ್ಲಿ ಹಾದು ೮–೨೮ ಮೀಟರ್ ಎತ್ತರದವರೆಗೂ ಹರಿಯುತ್ತದೆ. ಸುರಂಗ ತಳವು ೧.೧೬೦೦ ರಂತೆ ಇಳಿಜಾರಾಗಿದೆ.

ಈ ಸುರಂಗ ಭೀಮಾ ಶ್ರೇಣಿ ಅನ್ನುವ ಗಟ್ಟಿಯಾಗಿರುವ ಮಣ್ಣಿನ ಕಲ್ಲಿನ ಮುಖಾಂತರ ಹಾಯ್ದು ಹೋಗುತ್ತದೆ. ಸುರಂಗದ ಮೇಲೆ ಕನಿಷ್ಟ ೧೭ ಮೀಟರಿನಿಂದ ಗರಿಷ್ಟ ೩೧ ಮೀಟರಿನ ವರೆಗೆ ಭೂಮೇಲ್ಭಾಗವಿದೆ.

೨೦೨೧ರ ಸೆಪ್ಟೆಂಬರ್ ೧೭ ರಂದು ಸಾಲವಾಡಗಿ ಹತ್ತಿರವಿರುವ ಶ್ರೀ ವಿರೂಪಾಕ್ಷಪ್ಪಗೌಡರು ಹುತಾತ್ಮರಾದ ಮೂಕಾರ್ತಿ ಬೆಟ್ಟದ ಬಳಿಯಲ್ಲಿ ವಿರೂಪಾಕ್ಷಪ್ಪಗೌಡರ ಅಭಿಮಾನಿಗಳು, ಹಿತೈಷಿಗಳು, ಬಂಧುಗಳೆಲ್ಲ ಸಭೆ ಸೇರಿ ೨೦೨೧ ರಿಂದ ೨೦೨೨ರ ವರೆಗೆ ಶ್ರೀ ವಿರೂಪಾಕ್ಷಪ್ಪಗೌಡರ ಸಾಹಸಗಾಥೆಯನ್ನು

ತಿಳಿಸುವ ಕಾರ್ಯವನ್ನು ಮಾಡುವುದೆಂದು ಸಂಕಲ್ಪಿಸಲಾಯಿತು. ಗೌಡರ ಜೀವನ ಚಿತ್ರಣ, ಹೋರಾಟದ ಪ್ರಸಂಗಗಳನ್ನು ಶಾಲಾ ಮಕ್ಕಳಿಗೆ ತಿಳಿಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ವಿಶೇಷವಾಗಿ ಜನ್ಮ ಸ್ಥಳ ರಾಜನಕೋಳೂರು, ಹುತಾತ್ಮ ಸ್ಥಳ ಮೂಕಾರ್ತಿ ಬೆಟ್ಟ, ಮತ್ತು ಸಮಾಧಿ ಸ್ಥಳ ಹುಣಸಗಿಗಳಲ್ಲಿ ವಿರೂಪಾಕ್ಷಪ್ಪಗೌಡರ ಸ್ಮಾರಕಗಳನ್ನು ನಿರ್ಮಿಸಲು ನಿರ್ಧರಿಸಲಾಯಿತು.


❑

# ಅನುಬಂಧ

## ಛಾಯಾಚಿತ್ರಗಳು



ಹುತಾತ್ಮ ಶ್ರೀ ವಿರೂಪಾಕ್ಷಪ್ಪಗೌಡರ ಪುತ್ಥಳಿಯನ್ನು ರಾಜನಕೋಳೂರಿನ ಸರಕಾರಿ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿದೆ.




ಹುತಾತ್ಮ ಶ್ರೀ ವಿರೂಪಾಕ್ಷಪ್ಪಗೌಡರ ಧರ್ಮಪತ್ನಿ ಗಂಗಮ್ಮ ಗೌಡಶಾನಿಯವರು ವಿರೂಪಾಕ್ಷಪ್ಪಗೌಡರ ಭಾವಚಿತ್ರವನ್ನು ವೀಕ್ಷಿಸುತ್ತಿರುವದು.



**ಹುತಾತ್ಮ ಶ್ರೀ ವಿರೂಪಾಕ್ಷಪ್ಪಗೌಡರು ವಾಸವಿದ್ದ ಮನೆ.**



**ಹುತಾತ್ಮ ಶ್ರೀ ವಿರೂಪಾಕ್ಷಪ್ಪಗೌಡರು ಹತ್ಯೆಯಾದ ಸ್ಥಳ– ಮೂಕಾರ್ತಿ ಬೆಟ್ಟ.**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |



| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖